ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 29 ಜುಲೈ 20, 1980 ಬೆಲೆ : 50 ಪೈಸೆ

ಸಂಜಯ್ ನಂತರ

ತತ್ವನಿಷ್ಠೆ ಮತ್ತು ಸಂಘಟನಾ ನಿಷ್ಠೆಗೆ ಬದಲಾಗಿ ವ್ಯಕ್ತಿನಿಷ್ಠೆ ಆಧಾರಿತವಾಗಿರುವ ರಾಜಕೀಯದಲ್ಲಿ ಒಬ್ಬ ವ್ಯಕ್ತಿಯು ಕಣ್ಮರೆಯಾದೊಡನೆಯೆ ಅನೇಕ ಏರುಪೇರುಗಳಾಗುವುದು ಸ್ವಾಭಾವಿಕ. ವ್ಯಕ್ತಿನಿಷ್ಠೆಯೇ ಮುಖ್ಯವಾಗಿರುವ ಸಂದರ್ಭಸಾಧಕರಿಂದ ತುಂಬಿದ ಇಂದಿರಾಕಾಂಗ್ರೆಸ್ಸಿನಲ್ಲೂ ಮತ್ತು ಈ ಪಕ್ಷ ಕೇಂದ್ರ ಮತ್ತು ಹಲವು ರಾಜ್ಯಗಳಲ್ಲಿ ಅಧಿಕಾರದಲ್ಲಿರುವುದರಿಂದ ರಾಜಕೀಯದಲ್ಲೂ ಸಂಜಯಗಾಂಧಿಯ ಆಕಸ್ಮಿಕ ಮರಣದಿಂದ ತೀವ್ರ ಬದಲಾವಣೆಗಳು ಬರುವುದು ಸಾಧ್ಯವಿದೆ.

ಸಂಜಯಗಾಂಧಿ ಮರಣದಿಂದ ಸಂಜಯಗಾಂಧಿಯ ನೇರ ಬೆಂಬಲವನ್ನು ಪಡೆದು ಅಧಿಕಾರಕ್ಕೆ ಬಂದ ಕೆಲವು ರಾಜ್ಯದ ಮುಖ್ಯಮಂತ್ರಿಗಳು ಮತ್ತು ಹಲವಾರು ಮಂತ್ರಿಗಳ ಸ್ಥಾನವು ಅಲ್ಲಾಡತೊಡಗಿದೆ. ಪಕ್ಷದೊಳಗಿನ ಆಂತರಿಕ ಒಳಜಗಳ ಈಗ ಒಮ್ಮೆಲೇ ಬೃಹದಾಕಾರವಾಗುತ್ತಲಿದೆ. ಆಂಧ್ರದಲ್ಲಿ ಮುಖ್ಯಮಂತ್ರಿ ಚನ್ನಾರೆಡ್ಡಿಯವರ ವಿರುದ್ಧ ಹದಿನೈದು ಮಂತ್ರಿಗಳೂ ಸೇರಿದಂತೆ ವಿರೋಧ ಗುಂಪಿನ ಬಹಿರಂಗ ಬಂಡಾಯ, ಕರ್ನಾಟಕ

ಸಂಪಾದಕೀಯ

ದಲ್ಲಿ ಗುಂಡೂರಾಯರ ವಿರುದ್ಧ ಹೆಚ್ಚುತ್ತಲಿರುವ ಬಹಿರಂಗ ಚಟುವಟಿಕೆ, ಈಗತಾನೆ ಅಧಿಕಾರವಹಿಸಿದ ಮಹಾರಾಷ್ಟ್ರ ಮುಖ್ಯಮಂತ್ರಿ ಅಂತುಲೆ ಅವರ ವಿರುದ್ಧದ ಬಹಿರಂಗ ಚಟುವಟಿಕೆಗಳು ಮತ್ತು ಇನ್ನೂ ಹಲವಾರು ಕಡೆ ಪಕ್ಷದೊಳಗಿನ ಕಲಹ-ಇವನ್ನೆಲ್ಲಾ ಸಂಜಯಗಾಂಧಿಯ ಮರಣದ ಹಿನ್ನೆಲೆಯಲ್ಲಿ ನೋಡಬೇಕು. ಹಾಗೆಯೇ ಸಂಜಯಗಾಂಧಿ ಇಲ್ಲವಾದ ಈ ಸಂದರ್ಭದಲ್ಲಿ ಸಂಜಯಗಾಂಧಿ ಕಾರಣದಿಂದ ದೂರಹೋದ ಹಳೆ ಕಾಂಗ್ರೆಸ್ಸಿಗರು ಮತ್ತೆ ಇಂದಿರಾಕಾಂಗ್ರೆಸ್ ಸೇರುವ ಯತ್ನ ಪರಿಸ್ಥಿತಿಯನ್ನು ಇನ್ನೂ ಗೊಂದಲಮಯವನ್ನಾಗಿ ಮಾಡಲಿದೆ.

ಸಂಜಯಗಾಂಧಿ ಮರಣಾನಂತರ ಶಾಸ್ತ್ರೋಕ್ತವಾಗಿ ಮತ್ತು ವಿಧಿವತ್ತಾಗಿ ನಡೆಸಿದ ಅಂತ್ಯಕ್ರಿಯೆ ಮತ್ತು ವಿಶೇಷ ಟ್ರೈನ್ ಮತ್ತು ವಿಮಾನಗಳ ಮೂಲಕ ದೇಶದ ಮೂಲೆಮೂಲೆಗೆ ಚಿತಾಭಸ್ಮವನ್ನು ಕೊಂಡುಹೋಗಿ ಹರಡಿದ್ದನ್ನು ನೋಡಿದಲ್ಲಿ ನೆಹರೂಕುಟುಂಬ ಮತ್ತು ಕಾಂಗ್ರೆಸ್ಸಿಗರ ಪ್ರಗತಿಶೀಲ ಚಿಂತನೆ ಏನೆಂಬುದು ಅರ್ಥವಾಗುತ್ತದೆ. ಸಂಜಯ್ ಹೆಸರಲ್ಲಿ ಇದೆಲ್ಲಾ ನಡೆಸಿ, ತಾಯಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಲು ಮಾಡಿದ ತಂತ್ರಗಳಿವು ಎನಿಸುತ್ತದೆ.

(ಕಡೇ ಪುಟ ನೋಡಿ)

ತ್ರಿಪುರಾಕ್ಕೆ ಸಹಾಯ ಕಳುಹಿಸಲು ಸಿ. ಐ. ಟಿ. ಯು. ಕರೆ

ತ್ರಿಪುರಾದಲ್ಲಿ ಇತ್ತೀಚಿಗೆ ನಡೆದ ಹಿಂಸಾತ್ಮಕ ಘಟನೆಗಳಿಂದ ನೂರಾರು ಸಾವುನೋವುಗಳಾಗಿದ್ದು, ಲಕ್ಷಾಂತರ ಮಂದಿ ಮನೆಮಾರು ಕಳೆದುಕೊಂಡು ಬೀದಿಪಾಲಾಗಿರುವರು. ತ್ರಿಪುರಾದಲ್ಲಿ ತುರ್ತಿನ ಪರಿಹಾರ ಕಾರ್ಯಕ್ಕೆ ಆದಷ್ಟು ಹೆಚ್ಚಿಗೆ ಹಣಕಾಸು, ಬಟ್ಟೆಬರೆ, ಔಷಧಿ ಇತ್ಯಾದಿಗಳನ್ನು ಸಂಗ್ರಹಿಸಲು ತನ್ನೆಲ್ಲಾ ಸಂಘಟನೆಗಳಿಗೆ ತಾರೀಕು 15-7-80 ರಂದು ಬೆಂಗಳೂರಲ್ಲಿ ಸೇರಿದ್ದ ಸಿ. ಐ. ಟಿ. ಯು. ರಾಜ್ಯ ಮಂಡಳಿಯು ಕರೆ ಇತ್ತಿದೆ. ತ್ರಿಪುರಾದ ಎಡರಂಗ ಸರಕಾರವನ್ನು ಬೆಂಬಲಿಸಿ ರಾಷ್ಟ್ರದಾದ್ಯಂತ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮುನ್ನಡೆಯನ್ನು ಸಾಧಿಸುವ ಕೆಲಸಕ್ಕೆ ರಾಜ್ಯದ ಕಾರ್ಮಿಕ ವರ್ಗವನ್ನು ತಯಾರಿಸಲೂ ಮಂಡಳಿಯು ಕರೆ ಇತ್ತಿತು.

ಕರ್ನಾಟಕ ರಾಜ್ಯದ ಕಾಂಗ್ರೆಸ್ (ಐ) ಸರಕಾರವು ಅನುಸರಿಸುತ್ತಲಿರುವ ಕಾರ್ಮಿಕ ವಿರೋಧಿ ನೀತಿಗಳನ್ನು ಮತ್ತು ಕಾರ್ಮಿಕರ ಸಂಘಟಿತ ಹೋರಾಟಗಳನ್ನು ದಮನಗೊಳಿಸುವುದನ್ನು ಖಂಡಿಸಿದ ರಾಜ್ಯಮಂಡಳಿ ಸಭೆಯು, ಸರಕಾರವು ಜಾರಿಗೆ ತರಲು ಯೋಚಿಸುತ್ತಲಿರುವ 'ಅಗತ್ಯಸೇವಾ ಮಸೂದೆ'ಯನ್ನು ವಿರೋಧಿಸಲು 14-7-80 ರಂದು ಸೇರಿದ ಬೇರೆ ಬೇರೆ ಕಾರ್ಮಿಕ ಸಂಘಟನೆಗಳ ರಾಜ್ಯಮಟ್ಟದ ಸಮಾವೇಶವು ಆಗಸ್ಟ್ 18 ರಂದು ರಾಜ್ಯದಾದ್ಯಂತ ಒಂದು ದಿನದ ಸಾರ್ವತ್ರಿಕ ಮುಷ್ಕರವನ್ನು ನಡೆಸಲು ಕೊಟ್ಟಿರುವ ಕರೆಯನ್ನು ಸಂಪೂರ್ಣವಾಗಿ ಬೆಂಬಲಿಸಿದೆ. ಆಗಸ್ಟ್ 18ರ ಮುಷ್ಕರವನ್ನು ಸಂಪೂರ್ಣ ಯಶಸ್ವಿಗೊಳಿಸಲು ಶ್ರಮಿಸಲು ತನ್ನೆಲ್ಲಾ ಘಟಕಗಳಿಗೆ ರಾಜ್ಯ ಮಂಡಳಿಯು ಕರೆ ಇತ್ತಿದೆ.

ಬಹಳ ದೀರ್ಘ ಕಾಲದಿಂದ ನಡೆಯುತ್ತಿರುವ ಬೆಂಗಳೂರು ನಗರದಲ್ಲಿನ ಐಟಿಸಿ ಕಾರ್ಮಿಕರ ಹೋರಾಟ, ಬೆಳಗಾವಿಯ ಇಂಡಾಲ್ ಕಾರ್ಮಿಕರ ಮತ್ತು ಪವರ್‌ಲೂಮ್ ಕಾರ್ಮಿಕರ ಹೋರಾಟ, ಪೋಲೀಸ್ ದಬ್ಬಾಳಿಕೆಯನ್ನು ಎದುರಿಸಿ ನಡೆಸಿದ ಚಿಕ್ಕಮಗಳೂರು ಜಿಲ್ಲೆಯ ಸಂಸೆ ಟೀ ತೋಟ ಕಾರ್ಮಿಕರ ಧೀರ ಹೋರಾಟ-ಇವನ್ನೆಲ್ಲಾ ಚರ್ಚಿಸಿದ ಬಳಿಕ ಈ ಹೋರಾಟಗಳಿಗೆ ರಾಜ್ಯದಾದ್ಯಂತ ಬೆಂಬಲವನ್ನು ಪಡೆದು, ಸೌಹಾರ್ದ ಸಹಾಯ ಮಾಡಲು ನಿರ್ಣಯಿಸಲಾಯಿತು. ಬಹುರಾಷ್ಟ್ರೀಯ ಕಂಪೆನಿಗಳು ನಡೆಸುವ ಶೋಷಣೆಯ ವಿರುದ್ಧ ರಾಜ್ಯದಾದ್ಯಂತ ಪ್ರಚಾರ, ಪ್ರತಿಭಟನೆ ನಡೆಸಿ ಕಾರ್ಮಿಕರ

(ಕಡೇ ಪುಟ ನೋಡಿ)

ಗುಂಡೂರಾವ್ ಸರ್ಕಾರಕ್ಕೆ ಕಾರ್ಮಿಕರ ನೋಟೀಸ್

ಆಗಸ್ಟ್ ೧೮ಕ್ಕೆ ರಾಜ್ಯಾದ್ಯಂತ ಸಾರ್ವತ್ರಿಕ ಮುಷ್ಕರ

ರಾಜ್ಯದಲ್ಲಿನ ಇಂದಿರಾ ಕಾಂಗ್ರೆಸ್ ಪಕ್ಷದ ಗುಂಡೂರಾವ್ ಸರ್ಕಾರವು ತರಲು ಉದ್ದೇಶಿಸಿರುವ 'ಅಗತ್ಯ ಸೇವಾ ಶಾಸನ'ವನ್ನು ಜುಲೈ ತಿಂಗಳ ಅಂತ್ಯದೊಳಗೆ ಹಿಂತೆಗೆದುಕೊಳ್ಳದಿದ್ದರೆ ಎಲ್ಲಾ ಕೈಗಾರಿಕೆಗಳ ಕಾರ್ಮಿಕರು ರಾಜ್ಯದಾದ್ಯಂತ ಆಗಸ್ಟ್ 18 ರಂದು ಒಂದು ದಿವಸ ಮುಷ್ಕರ ಮಾಡಲಿದ್ದಾರೆ.

ಗುಂಡೂರಾವ್ ಸರ್ಕಾರಕ್ಕೆ ಎಚ್ಚರಿಕೆಯ ಈ ನೋಟೀಸನ್ನು ನೀಡಿದವರು ಕರ್ನಾಟಕ ರಾಜ್ಯದ ಕಾರ್ಮಿಕ ವರ್ಗದ ಪ್ರತಿನಿಧಿಗಳು. ಸಂದರ್ಭ... "ಟ್ರೇಡ್‌ಯೂನಿಯನ್ ಹಕ್ಕುಗಳಿಗಾಗಿ ಕರ್ನಾಟಕ ಕಾರ್ಮಿಕರ ಸಮಾವೇಶ".

ಜುಲೈ 14ರಂದು ಬೆಂಗಳೂರಿನ ಪುರಭವನದಲ್ಲಿ ಜರುಗಿದ ರಾಜ್ಯಮಟ್ಟದ ಕಾರ್ಮಿಕ ಸಮಾವೇಶದಲ್ಲಿ ಒಂದುಸಾವಿರ ಪ್ರತಿನಿಧಿಗಳು ರಾಜ್ಯದ ಎಲ್ಲ ಜಿಲ್ಲೆಗಳಿಂದ ಬಂದು ಸೇರಿದ್ದರು.

ಬೆಳಗ್ಗೆ 10 ಗಂಟೆಗೆ ಸಮಾವೇಶದ ಆರಂಭ. ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಹೆಚ್.ಎಂ.ಎಸ್., ಬಿ.ಎಂ.ಎಸ್. ಮತ್ತು ಐ.ಎನ್.ಟಿ.ಯು.ಸಿ ಯಿಂದ ಕ್ರಮವಾಗಿ 255, 315, 135, 55 ಹಾಗೂ 5 ಪ್ರತಿನಿಧಿಗಳು ಭಾಗವಹಿಸಿದ್ದರು. ಉಳಿದವರು ಸ್ವತಂತ್ರ ಟ್ರೇಡ್‌ಯೂನಿಯನ್, ಬ್ಯಾಂಕ್, ಜೀವವಿಮೆ ಹಾಗೂ ರಕ್ಷಣಾ ವಿಭಾಗದ ಪ್ರತಿನಿಧಿಗಳಾಗಿದ್ದರು.

ಕೇಂದ್ರ ಕಾರ್ಮಿಕ ಸಂಘಗಳ ಎಲ್ಲ ನಾಯಕರುಗಳು ಮಾಡಿದ ಭಾಷಣಗಳ ಒಟ್ಟು ಅಂಶ : ರಾಜ್ಯಸರ್ಕಾರವು ತರುತ್ತಿರುವ ಉದ್ದೇಶಿತ 'ಅಗತ್ಯ ಸೇವಾ ಶಾಸನ'ವು ಕಾರ್ಮಿಕವಿರೋಧಿ ಶಾಸನ, ಆದ್ದರಿಂದ ಅದನ್ನು ಐಕ್ಯತೆಯಿಂದ, ಒಗ್ಗಟ್ಟಾಗಿ ಕಾರ್ಮಿಕರೆಲ್ಲರೂ ವಿರೋಧಿಸಬೇಕು-ಸೋಲಿಸಬೇಕು. ಸರ್ಕಾರದ ಕಾರ್ಮಿಕವಿರೋಧಿ ನೀತಿಗೆ ಕಡಿವಾಣ ಹಾಕಬೇಕು" ಎಂದು ಎಲ್ಲಾ ಕಾರ್ಮಿಕ ನಾಯಕರುಗಳು ಹೇಳಿದರು.

ಆದರೆ ಸರ್ಕಾರವು ಉದ್ದೇಶಿತ ಮಸೂದೆಯನ್ನು 'ಸೆಲೆಕ್ಟ್ ಸಮಿತಿ'ಗೆ ವಹಿಸಿದ್ದು ವರದಿಗಾಗಿ ಕಾಯುತ್ತಿದೆ. ವರದಿ ಬಂದ ಮೇಲೆ ಉದ್ದೇಶಿತ ಬಿಲ್ ಶಾಸನಸಭೆಯ ಮುಂದೆ ಬಂದು ಮಸೂದೆಯಾಗುತ್ತದೆ ಕಾರ್ಮಿಕ ವಿರೋಧಿ ಶಾಸನ ತರುತ್ತಿರುವ ಇಂದಿರಾ ಕಾಂಗ್ರೆಸ್ಸಿಗೆ ರಾಜ್ಯ ವಿಧಾನ ಸಭೆಯಲ್ಲಿ ಬಹುಮತವಿರುವುದರಿಂದ ಮತ್ತು ಕಾರ್ಮಿಕವರ್ಗದ ಪ್ರತಿನಿಧಿಗಳು ಶಾಸನಸಭೆಯಲ್ಲಿ ಗಣನೀಯ ಪ್ರಮಾಣದಲ್ಲಿ ಇಲ್ಲದಿರುವುದರಿಂದ ಸರ್ಕಾರದ ಕಾರ್ಮಿಕ ವಿರೋಧಿ ಶಾಸನ ಸಲೀಸಾಗಿ ಪಾಸಾಗುತ್ತದೆ. ಪರಿಸ್ಥಿತಿ ಹೀಗಿರುವಾಗ ಸರ್ಕಾರವನ್ನು ಸೋಲಿಸುವುದು ಹೇಗೆ? ಕಾರ್ಮಿಕ ಪ್ರತಿನಿಧಿಗಳ ಮುಂದೆ ಎದ್ದ ಸಮಸ್ಯೆ ಇದು. ಈ ಸಮಸ್ಯೆಗೆ ಸಮರ್ಥ ಪರಿಹಾರವನ್ನು ಸಮಾವೇಶವನ್ನು ಸಂಘಟಿಸಿದ ಜಂಟಿ ಕ್ರಿಯಾ ಸಮಿತಿಯ ಪರವಾದಿ ಕಾಂ. ವಿ.ಜೆ.ಕೆ. ನಾಯರ್ ಮಂಡಿಸಿದ ನಿರ್ಣಯದಲ್ಲಿ ಸೂಚಿಸಲಾಯಿತು.

ಪ್ರಸಕ್ತ ತಿಂಗಳ ಅಂತ್ಯದೊಳಗೆ ಉದ್ದೇಶಿತ ಬಿಲ್ ಅನ್ನು ರಾಜ್ಯ ಸರ್ಕಾರವು ಕೈಬಿಡದಿದ್ದರೆ ಎಲ್ಲಾ ಆಡಳಿತ ವರ್ಗಗಳಿಗೆ ಮತ್ತು ಸರ್ಕಾರಕ್ಕೆ ಕಾರ್ಮಿಕ ಸಂಘಗಳಿಂದ ಮುಷ್ಕರದ ನೋಟೀಸನ್ನು ಆಗಸ್ಟ್ ಒಂದರಂದು ಕೊಡಲು ಸೂಚಿಸಲಾಯಿತು. ಸರ್ಕಾರವು ಆಗಲೂ ಕಾರ್ಮಿಕ ಸಂಘಟನೆಗಳ ಮತ್ತು ಪ್ರತಿನಿಧಿಗಳ ಮಾತಿಗೆ ಬೆಲೆ ಕೊಡದಿದ್ದರೆ ಮುಷ್ಕರ ಮಾಡುವುದು ಅನಿವಾರ್ಯವಾಗುತ್ತದೆ; ಆಗಸ್ಟ್ 18 ರಂದು ಒಂದು ದಿನದ ಮುಷ್ಕರವನ್ನು ರಾಜ್ಯಾದ್ಯಂತ ಮಾಡೋಣ ಎಂದು ಕರೆ ಈಯುವ ನಿರ್ಣಯವೊಂದನ್ನು ಪ್ರತಿನಿಧಿಗಳ ಸಭೆಯ ಮುಂದಿಟ್ಟರು.

ನಿರ್ಣಯದ ಮೇಲೆ ಮಾತನಾಡಿದ ಎಲ್ಲಾ ಪ್ರತಿನಿಧಿಗಳು ಈ ಠರಾವಿಗೆ ತಮ್ಮ ಒಕ್ಕೊರಲಿನ ಬೆಂಬಲ ಸಾರಿದರು, ರಾಜ್ಯ ಸರ್ಕಾರವು ತರಲು ಉದ್ದೇಶಿಸಿರುವ ಶಾಸನ ತಮ್ಮನ್ನು ಮುಷ್ಕರದೆಡೆಗೆ ನೂಕಿದೆ ಎಂದರು ಅವರೆಲ್ಲ. ಕರಾಳ ಶಾಸನ ಇದು ಎಂದರು. ಕರಿ ಕಾಯಿದೆ ಎಂದರು. ಗುಂಡೂರಾವ್ ಅವರು ಕಾರ್ಮಿಕರ ಮೇಲೆ ಹಾರಿಸಿದ ಗುಂಡು ಉದ್ದೇಶಿತ ಈ ಶಾಸನ ಎಂದೂ ಹೇಳಿದರು. ಗುಂಡೂರಾವ್ ಸರ್ಕಾರವನ್ನು ಗಗನಕ್ಕೆ ಕಳಿಸುವ ಶಾಸನ ಇದಾಗಲಿ ಎಂದು ಆಶಿಸಿದರು.

ರಾಜ್ಯದ ದಕ್ಷಿಣ ತುದಿ ಜಿಲ್ಲೆಯ ಕೋಲಾರದ ಕೆ.ಜಿ.ಎಫ್., ಉತ್ತರದ ತುದಿ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಿಂದ ಬಂದು ಮಾತನಾಡಿದ ಕಾರ್ಮಿಕ ಪ್ರತಿನಿಧಿಗಳ ಬೆಂಗಳೂರ್ ಕನ್ನಡ, ಮಂಗಳೂರ್ ಕನ್ನಡ, ಧಾರವಾಡ್ ಕನ್ನಡ ಭಾಷೆಯ ಶೈಲಿ ಸಮ್ಮೇಳನದಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು.

(ಕಡೇ ಪುಟ ನೋಡಿ)

ತ್ರಿಪುರ

ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಂದುಗೂಡುತ್ತಿವೆ

ತ್ರಿಪುರಾದ ಗಲಭೆಗಳು ಈಗ ಸುಮಾರಾಗಿ ನಿಲುಗಡೆಗೆ ಬಂದು, ಅಶಾಂತಿಯುತವಾಗಿದ್ದ 150 ಪಂಚಾಯತಿ ಪ್ರದೇಶಗಳು (ತ್ರಿಪುರದಲ್ಲಿ ಒಟ್ಟು 689 ಪಂಚಾಯತಿಗಳಿವೆ) ಈಗ ನೆಮ್ಮದಿಗೆ ಹಿಂತಿರುಗುತ್ತಿರುವುದು ಅನೇಕ ಪ್ರತಿಗಾಮಿ, ಪಟ್ಟಭದ್ರ ಶಕ್ತಿಗಳಿಗೆ ಅಸಹನೆಯನ್ನು ತಂದಿದೆ. ಕೋಮುದ್ವೇಷದ ಜ್ವಾಲೆಯು ಹೆಚ್ಚು ಹೆಚ್ಚು ಉರಿಯುವಂತೆ ಅವರು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಏಕೆಂದರೆ ಬಡಜನತೆಯ ಈ ದುರಾದೃಷ್ಟದಲ್ಲಿ ಅವರು ತಮ್ಮ ಗರಿಷ್ಠ ರಾಜಕೀಯ ಲಾಭಗಳನ್ನು ಪಡೆದುಕೊಳ್ಳುವ ಅವಕಾಶವಿದೆ.

ಜನತೆಯ ಮೇಲೆ ನಡೆದ ಪ್ರಹಾರಗಳು ಇದ್ದಕ್ಕಿದ್ದಂತೆ ತೀವ್ರವಾಗಿ ಆಘಾತಕರವಾಗಿ ನಡೆದವು. ಬುಡಕಟ್ಟು ಪ್ರದೇಶಗಳಲ್ಲಿ ಬುಡಕಟ್ಟಿಗೆ ಸೇರದವರನ್ನು (ಬಂಗಾಲಿಗಳು) ಸಾಮೂಹಿಕವಾಗಿ ಕೊಲ್ಲುವ ಯೋಜನೆಯನ್ನು ತ್ರಿಪುರ ಉಪಜಾತಿ ಯುವಸಮಿತಿ ರೂಪಿಸಿತು. ಬುಡಕಟ್ಟು ಹಳ್ಳಿಗಳಲ್ಲಿ ಹಲ್ಲೆಗಳನ್ನು ಅಮ್ರಬಂಗಾಲಿಗಳು ಮತ್ತು ಕಾಂಗ್ರೆಸ್ ಬೆಂಬಲಿಗರು ನಡೆಸಿದರು. ಬುಡಕಟ್ಟು ಉಗ್ರಗಾಮಿಗಳನ್ನು ಪ್ರತಿರೋಧಿಸುವ ನೆಪದಲ್ಲಿ ಕೆಲವೆಡೆ ಪೋಲೀಸ್ ಗೋಲೀಬಾರಿನ ಹೆಸರಿನಲ್ಲಿ ಸಮಾಜ ವಿರೋಧಿ ರೌಡಿಗಳು ಕೊಲೆ, ಸುಡುವುದು, ಲೂಟಿ ಮಾಡುವುದು ಇವುಗಳನ್ನು ಬುಡಕಟ್ಟಿನವರಲ್ಲದ (ಬಂಗಾಲಿ) ಪಟ್ಟಣಗಳು ಮತ್ತು ಬಜಾರುಗಳಲ್ಲಿ ನಡೆಸಿದರು.

ಮಂಡಿ ಮುಂತಾದ ಬುಡಕಟ್ಟಿನ ಪ್ರದೇಶಗಳಲ್ಲಿ ನಡೆದ ಬಂಗಾಲಿಗಳ ಸಾಮೂಹಿಕ ಕೊಲೆಗಳ ಬಗ್ಗೆ ಭಯಾನಕ ಕತೆಗಳನ್ನು ಪ್ರಕಟಿಸಿದ ಬೂರ್ಜ್ವಾ ಪತ್ರಿಕೆಗಳು, ತ್ರಿಪುರ ಉಪಜಾತಿ ಯುವಸಮಿತಿ ಸಾಮೂಹಿಕ ಕೊಲೆಗಳನ್ನು ನಡೆಸಿದಾಗ ಬುಡಕಟ್ಟು ಅಲ್ಪಸಂಖ್ಯಾತರಿಗೆ ಏನಾಯಿತು ಎಂಬುದನ್ನು ವರದಿ ಮಾಡಿಲ್ಲ. ಕಲ್ಯಾಣ ಠಾಕೂರ್, ಮೇಗ್ಲಿಪುರ, ಪ. ತ್ರಿಪುರ ಮತ್ತು ಉಭಯ್‌ಪುರದ ಹದ್ರಿ-ಶಿಲ್ ಗಟಿ, ದ. ತ್ರಿಪುರಗಳಲ್ಲಿ ಕೂಡ ಬುಡಕಟ್ಟಿನವರ ಸಾಮೂಹಿಕ ಕೊಲೆಗಳು ನಡೆದಿವೆ.

ಬುಡಕಟ್ಟಿನವರಿಗೆ ತುಂಬ ಅನಾನುಕೂಲತೆಯಿದೆ. ಎಲ್ಲ ಪೋಲೀಸ್ ಠಾಣೆಗಳು, ಸರ್ಕಾರಿ ಕಚೇರಿಗಳು, ಆಸ್ಪತ್ರೆಗಳು, ಪಟ್ಟಣಗಳು, ದೊಡ್ಡ ಮಾರುಕಟ್ಟೆಗಳು ಮುಖ್ಯವಾಗಿ ಬಂಗಾಲಿ ಪ್ರದೇಶಗಳಲ್ಲೇ ನೆಲೆಸಿದ್ದು, ಬುಡಕಟ್ಟಿನ ಪ್ರದೇಶಗಳು ಬಹಳ ಕಾಲದಿಂದಲೂ ದೂರವಾಗಿವೆ. ತಮ್ಮ ಬಂಧುಗಳನ್ನು ಕಳೆದುಕೊಂಡವರು, ಕೊಲೆಗಾರರ ವಿರುದ್ಧ ಪೋಲೀಸರಿಗೆ ದೂರು ಕೊಡಲು ಆಗಲೇ ಇಲ್ಲ. ಗುಂಡೇಟಿಗೆ ಬಲಿಯಾದವರನ್ನು ಆಸ್ಪತ್ರೆಗಳಿಗೆ ಕರಲಾಗಲಿಲ್ಲ. ತಮ್ಮ ಗುಡಿಸಲುಗಳನ್ನು ಕಳೆದುಕೊಂಡವರು, ಸರ್ಕಾರವು ಪರಿಹಾರ ಕೇಂದ್ರಗಳನ್ನು ತೆರೆಯುವವರೆಗೆ ಕಾಡಿನಲ್ಲಿ ಉಪವಾಸ ಇರಬೇಕಾಯಿತು. ರೇಷನ್ ಅಂಗಡಿಗಳೂ ಮುಚ್ಚಿದ್ದವು. ಏಕೆಂದರೆ ಡೀಲರುಗಳು ಮತ್ತು ಸರ್ಕಾರಿ ನೌಕರರು (ಇವರಲ್ಲಿ ಬಹುಜನ ಬಂಗಾಲಿಗಳು) ಭಯದಿಂದ ತಮ್ಮ ಕೆಲಸ ಬಿಟ್ಟು ಬಂದರು.

ಈ ಆಂದೋಳನವನ್ನು ಮೊದಲೇ ತಡೆಯಲು ವಾಮರಂಗ ಸರ್ಕಾರಕ್ಕೆ ಏಕೆ ಸಾಧ್ಯವಾಗಲಿಲ್ಲ? ಮೊದಲಿಗೇ, ಇಲ್ಲಿಗೆ ಕಳಿಸಲು ಅವಶ್ಯವಾದ ಪಡೆಗಳು ಇರಲಿಲ್ಲ. ಪರಿಸ್ಥಿತಿಯನ್ನು ಹದಗೊಳಿಸಲು ಒಂದು ವಾರದ ನಂತರ ಕೆಲವು ಪಡೆಗಳು ವಿಮಾನದಲ್ಲಿ ಬೇರೆ ರಾಜ್ಯಗಳಿಂದ ಬಂದವು. ಅಲ್ಲದೆ ಪರಿಸ್ಥಿತಿಯನ್ನು ಹತೋಟಿಗೆ ತರುವುದರಲ್ಲಿ ನ್ಯಾಯಾಂಗ ಮತ್ತು ಆಡಳಿತಯಂತ್ರ ವಾಮರಂಗ ಸರ್ಕಾರಕ್ಕೆ ಸಮಸ್ಯೆಗಳನ್ನು ತಂದವು.

ಬುಡಕಟ್ಟಿನವರ ಸಾವುಗಳ ಸರಿಯಾದ ಸಂಖ್ಯೆ ಕೊಡಲು ಸಾಧ್ಯವಿಲ್ಲ. ಅವರ ಶವಗಳನ್ನು ನದಿಗೆ ಎಸೆಯಲಾಗಿದೆ. ಅನೇಕ ಬುಡಕಟ್ಟಿನವರು "ಕಾಣೆಯಾಗಿದ್ದಾರೆ". ಅಧಿಕೃತ ದಾಖಲೆಗಳ ಪ್ರಕಾರ 522 ಸಾವುಗಳಲ್ಲಿ, 66 ಬುಡಕಟ್ಟಿನವರದು. "ಗುರುತಿಸಿಲ್ಲದ" ಶವಗಳು 110 (ಜೂನ್ 28ರ ವರೆಗೆ)

ಅಮ್ರಬಂಗಾಲಿಗಳು, ಬುಡಕಟ್ಟು ಉಗ್ರಗಾಮಿಗಳು ಮತ್ತು ಕಾಂಗ್ರೆಸ್ ಬೆಂಬಲಿಗರಿಗೆ ಚಟುವಟಿಕೆ ಹೆಚ್ಚಿಸಲು ಸಾಧ್ಯವಾಗದಿದ್ದರೂ ಅಲ್ಲೊಂದು ಇಲ್ಲೊಂದು ಕೊಲೆ, ಬೆಂಕಿ, ಲೂಟಿ ನಡೆಯುತ್ತಿವೆ. ಎರಡು ಲಕ್ಷ ನಿರಾಶ್ರಿತರಿಗೆ ಶಿಬಿರ ಬಿಡದಿರಲು ಸೂಚಿಸಲಾಗಿದೆ. ಏಕೆಂದರೆ ಇದನ್ನು ಉಪಯೋಗಿಸಿಕೊಂಡು ಅವರು, ರಾಷ್ಟ್ರಪತಿ ಆಡಳಿತ ತರುವ ತಮ್ಮ ರಾಜಕೀಯ ಉದ್ದೇಶವನ್ನು ಈಡೇರಿಸಿಕೊಳ್ಳಬಹುದು.

ಎಲ್ಲ ಪಕ್ಷಗಳ ಶಾಂತಿ, ಪರಿಹಾರ, ಪುನರ್ವಸತಿ ಸಮಿತಿಯನ್ನು ರಚಿಸಲಾಗಿದೆ. ಕಾಂಗ್ರೆಸ್ (ಯು), ಭಾರತೀಯ ಜನತಾ, ಜನತಾ, ಕಮ್ಯುನಿಸ್ಟ್ ಪಕ್ಷ, ಆರ್. ಎಸ್. ಪಿ., ಫಾರ್ವರ್ಡ್ ಬ್ಲಾಕ್ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳು ಈ ಸಮಿತಿಗೆ ಸೇರಿದರೆ ಕಾಂಗ್ರೆಸ್ ಕ್ಷುದ್ರ ನೆಪಗಳನ್ನು ಕೊಟ್ಟು ದೂರವಾಯಿತು. ಅಮ್ರಬಂಗಾಲಿಗಳ ಜೊತೆ ಸೇರಿ ಕಾಂಗ್ರೆಸ್ ಅಂಶಗಳು ಅಶಿಸ್ತನ್ನು ಉಂಟುಮಾಡುತ್ತಿವೆ. ವಾಮರಂಗ ಸರ್ಕಾರದ ಪರಿಹಾರ ಪ್ರಯತ್ನಗಳನ್ನು ವಿರೋಧಿಸುತ್ತಿವೆ. ಕೊಲೆ, ಲೂಟಿಗಳನ್ನು ನಡೆಸಿದವರನ್ನು ಅವರು ಟೀಕಿಸಿದೆ, ಸೌಹಾರ್ದ ತರಲೆತ್ನಿಸುತ್ತಿರುವ ವಾಮರಂಗ ಸರ್ಕಾರವನ್ನು ಅವರು ಟೀಕಿಸುತ್ತಿದ್ದಾರೆ.

ಬುಡಕಟ್ಟಿಗೆ ಸೇರಿದ ಯಾವನೂ ಬುಡಕಟ್ಟಿನವರಲ್ಲದವರ ಪ್ರದೇಶಗಳಿಗೆ ಯಾವ ಕೆಲಸಕ್ಕೂ ಪ್ರವೇಶಿಸದಂತೆ, ಅವರ ಉತ್ಪನ್ನಗಳನ್ನು ಇಲ್ಲಿ ಬಂದು ಮಾರಲೂ ಪ್ರಯತ್ನಿಸದಿರುವಂತೆ ನೋಡಿಕೊಳ್ಳುವುದೇ ಅಮ್ರಬಂಗಾಲಿ-ಕಾಂಗ್ರೆಸ್ ಬೆಂಬಲಿಗರ ಮುಖ್ಯ ಚಟುವಟಿಕೆಯಾಗಿದೆ. ರೇಷನ್ ಮತ್ತು ಪರಿಹಾರ ವಸ್ತುಗಳಾವುವೂ ಬುಡಕಟ್ಟು ಪ್ರದೇಶಕ್ಕೆ ಹೋಗಬಾರದು. ಏಕೆಂದರೆ ಈ ಕೋಮು ಗಲಭೆ ಆರಂಭಿಸಿದ ಬುಡಕಟ್ಟು ಉಗ್ರಗಾಮಿಗಳು ಇನ್ನೂ ಎಚ್ಚರಿದ್ದಾರೆ, ಅವರ ಎಲ್ಲ ಆಯುಧಗಳನ್ನು ವಶಪಡಿಸಿಕೊಂಡಿಲ್ಲ ಎಂದು ಕಾಂಗ್ರೆಸ್ ಪತ್ರಿಕೆಗಳ ಒಂದು ಗುಂಪು ಹೇಳುತ್ತಿದೆ. ದುಷ್ಟಊಹೆಗಳು, ಆಧಾರರಹಿತ ಅಪಾದನೆ ಇವುಗಳನ್ನು ಬಂಗಾಳಿಗಳ ನಡುವೆ ಹರಡಿ ಬಂಗಾಲಿಗಳನ್ನು ಭೀತಿಯಲ್ಲಿಡುತ್ತಿದ್ದಾರೆ ಬುಡಕಟ್ಟು ಮತ್ತು ಬಂಗಾಲಿಗಳ ಐಕ್ಯತೆಯನ್ನು ಸಾರುವ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಮೇಲೆ ಆಕ್ರಮಣ ಮಾಡಲು ಸಿದ್ಧತೆಗಳಾಗುತ್ತಿವೆ. ಈ ಕೋಮುವಾದಿ ರೌಡಿಗಳನ್ನು ರಾಜಕೀಯವಾಗಿ ದೂರವಿರಿಸದಿದ್ದರೆ, ತ್ರಿಪುರದಲ್ಲಿ ಮತ್ತೆ ಹಿಂಸಾತ್ಮಕ ಗಲಭೆ ಹರಡುವ ಸಂಭವವಿದೆ.

ಈ ಅಮ್ರಬಂಗಾಲಿ ಮತ್ತು ಕಾಂಗ್ರೆಸ್‌ಗಳ ಪ್ರೇರೇಪಣೆಗಳ ನಡುವೆಯೂ ಉತ್ತರ ಜಿಲ್ಲೆಯಲ್ಲಿ ಶಾಂತಿ ಪಾಲನೆಯಾಗಿರುವುದು ಸಮಾಧಾನಕರವಾದ ಅಂಶ. ಎಲ್ಲ ಪಕ್ಷಗಳ ನೂರಾರು ಶಾಂತಿ ಸಮಿತಿಗಳು ಗ್ರಾಮಮಟ್ಟದಲ್ಲಿ ರಚಿತವಾಗಿವೆ. ಪಶ್ಚಿಮ ಮತ್ತು ದಕ್ಷಿಣ ಜಿಲ್ಲೆಗಳಲ್ಲಿಯೂ ಸಹ ಬುಡಕಟ್ಟಿನವರು ಇತರರ ಮತ್ತು ಬುಡಕಟ್ಟಿಗೇ ಸೇರದವರು ಬುಡಕಟ್ಟಿನವರ ಜೀವಗಳನ್ನು ಸಂರಕ್ಷಿಸಿದ ಅನೇಕ ಪ್ರಸಂಗಗಳಿವೆ. ಗಲಭೆ ಪೀಡಿತ ಜಿಲ್ಲೆಗಳಲ್ಲೂ ಸಹ ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಗ್ಗೂಡುತ್ತಿವೆ.

○

ಹರಿಜನ ಮಹಿಳೆಯ ಮೇಲಿನ ಅತ್ಯಾಚಾರ ಖಂಡನೆ

ಕೋಲಾರಜಿಲ್ಲೆ ಚಿಂತಾಮಣಿ ತಾಲ್ಲೂಕಿನಲ್ಲಿ ಜುಲೈ 7ರಂದು ಹರಿಜನ ಮಹಿಳೆ ನಾಗಮ್ಮನ ಮೇಲೆ ನಡೆದ ಅತ್ಯಾಚಾರವನ್ನು ಖಂಡಿಸುವ ಸಲುವಾಗಿ ಬಹಿರಂಗ ಸಭೆ ನಡೆಯಿತು. ದಲಿತ ಸಂಘರ್ಷ ಸಮಿತಿ, ದಲಿತ ಮಹಿಳಾ ವಿಮೋಚನೆ, ರೈತಸಂಘ, ಎಸ್.ಎಫ್.ಐ., ಮತ್ತು ನೂರಾರು ನಾಗರಿಕರು ಮೆರವಣಿಗೆ ನಡೆಸಿ, ಅತ್ಯಾಚಾರ ನಡೆಸಿದವರಿಗೆ ಶಿಕ್ಷೆಯಾಗಲಿ, "ಡಾ. ಸಾವಿತ್ರಮ್ಮನನ್ನು ಸಸ್ಪೆಂಡ್ ಮಾಡಿ" "ಲಂಚಕೋರ ಪೋಲೀಸರಿಗೆ ಧಿಕ್ಕಾರ" "ಕೂಲೀವಾಲ ಆಚ್ಚಾ ಹೈ ಡಾ. ಸಾವಿತ್ರಮ್ಮ ಲುಚ್ಚಾ ಹೈ" ಎಂಬ ಘೋಷಣೆಗಳನ್ನು ಕೂಗಿದರು. ಆಜಾದ್ ಚೌಕದಲ್ಲಿ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ದಲಿತ ಸಂಘರ್ಷ ಸಮಿತಿಯ ರಾಜ್ಯಸಂಚಾಲಕ ಬಿ ಕೃಷ್ಣಪ್ಪನವರು ವಹಿಸಿದ್ದರು. ಮೊದಲಿಗೆ ದಲಿತ ನಾಯಕ ವೆಂಕಟೇಶ್ ಮಾತನಾಡಿ ದಲಿತರ ಮೇಲಿನ ದೌರ್ಜನ್ಯಗಳನ್ನು ವಿವರಿಸುತ್ತಾ, ಮೂರು ವರ್ಷಗಳ ಹಿಂದೆ ಪಾಪದಿಮ್ಮನ ಹಳ್ಳಿಯಲ್ಲಿ ಕೇವಲ ಎರಡು ರೂಪಾಯಿ ಬಾಕಿಗಾಗಿ ಊರಿನ ಜಮೀನುದಾರನು ಹರಿಜನ ಮಹಿಳೆಯೊಬ್ಬಳನ್ನು ಚಾವಡಿ ಕಂಬಕ್ಕೆ ಕಟ್ಟಿ ಹಾಕಿ ಮರ್ಮಾಂಗಕ್ಕೆ ಗೂಟ ಹೊಡೆದ ಹೇಯ ಪ್ರಕರಣವನ್ನು ಸಭೆಗೆ ತಿಳಿಸಿದಾಗ ಅಲ್ಲಿದ್ದ ಹೆಣ್ಣುಮಕ್ಕಳ ಕಣ್ಣಲ್ಲಿ ನೀರು ತೊಟ್ಟಿಕ್ಕಿತು. ನಂತರ ಜಿಲ್ಲಾ ರೈತಸಂಘದ ನಾಯಕ ಕಾಂ. ಲಕ್ಷ್ಮಣರೆಡ್ಡಿ ಮಾತನಾಡುತ್ತಾ, ನಾವು ಈ ವಿಷಯವನ್ನು ವರ್ಗದೃಷ್ಟಿಯಿಂದ ನೋಡಬೇಕೇ ವಿನಹ ಜಾತಿಯ ದೃಷ್ಟಿಯಿಂದ ಅಲ್ಲ ಎಂದು ಹೇಳಿದರು. ಎಲ್ಲಾ ಜಾತಿಯ ದುಡಿಯುವವರೂ ದಲಿತರೇ. ದುಡಿಯುವವರ ಮೇಲೆ ಅತ್ಯಾಚಾರ ದೌರ್ಜನ್ಯ ನಡೆದಾಗ ಪ್ರತಿಭಟಿಸುವುದು ಎಲ್ಲ ಮಾನವರ ಕರ್ತವ್ಯ ಎಂದರು. ನಂತರ ಶಿವಣ್ಣ ಅವರು ಸಭೆಯಲ್ಲಿ ಮಾತನಾಡಿದರು.

ದಲಿತ ಮಹಿಳಾ ವಿಮೋಚನಾ ಸಂಘಟನೆಯ ಪರವಾಗಿ ಮೀರಾ ಅವರು ಮಹಿಳೆಯರು ಒಂದಾಗಿ ಇಂತಹ ಅನಾಚಾರಗಳ ವಿರುದ್ಧ ಹೋರಾಡಲು ಕರೆಯಿತ್ತರು. ಹುಣಿಸೆಕೋಟೆಯ ಅನಸೂಯಮ್ಮ ದಲಿತ ಜಾಥಾದ ಅನುಭವಗಳನ್ನು ವಿವರಿಸಿದರು. ಕೋಲಾರದ ವಕೀಲರಾದ ಆರ್. ವೆಂಕಟರಾಮಯ್ಯ ಈ ಘಟನೆಯನ್ನು ಖಂಡಿಸಿದರು. ಕೊನೆಯಲ್ಲಿ ಸಮಿತಿಯವರಿಂದ "ಶೇಷಗಿರಿಯಪ್ಪನ ಕಗ್ಗೊಲೆ" ನಾಟಕ ನಡೆಯಿತು.

●

ಕಾರ್ಮಿಕ ಸಮಸ್ಯೆಗಳ ಬಗ್ಗೆ ಚರ್ಚೆ

ಕರ್ನಾಟಕದಲ್ಲಿ ಹೆಚ್ಚುತ್ತಿರುವ ಕಾರ್ಮಿಕ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಪತ್ರಕರ್ತರ ಸಂಘದವರು ಎಲ್ಲ ಕಾರ್ಮಿಕ ನಾಯಕರ ಸಭೆ ಕರೆದಿದ್ದರು. ಕಾರ್ಮಿಕ ಸಚಿವ ಇಬ್ರಾಹಿಂ ಅವರು ಇದರಲ್ಲಿ ಭಾಗವಹಿಸಿದ್ದರು. ಕಾರ್ಮಿಕರು ರಾಜಕೀಯದಿಂದ ದೂರ ಇರಬೇಕೆಂದು ತಿಳಿಸಿದ ಅವರು, ಕಾರ್ಮಿಕರ ಪರ ಕಾನೂನು ಬದಲಾಗಬೇಕಿದ್ದರೆ ವ್ಯವಸ್ಥೆ ಬದಲಾವಣೆ ಅಗತ್ಯ ಎಂದರು.

ಕರ್ನಾಟಕದಲ್ಲಿ ಪೋಲೀಸಿನವರದೆ ಸರ್ಕಾರವಾಗಿದೆ ಎಂದು ಸಿ. ಐ. ಟಿ. ಯು. ಅಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣರಾವ್ ಮಾತನಾಡಿದರು. ನ್ಯಾಯವಾದ ಹೋರಾಟ ನಡೆಸಿದರೆ ನಾವು ಮೊದಲು ನೋಡುವುದು ಪೋಲೀಸಿನವರನ್ನೇ ಹೊರತು ಕಾರ್ಮಿಕ ಅಧಿಕಾರಿಗಳನ್ನಲ್ಲ ಎಂದು ಅವರು ತಿಳಿಸಿದರು. ಪತ್ರಿಕೆಗಳು ಕಾರ್ಮಿಕರ ಸಮಸ್ಯೆಗಳು ಮತ್ತು ಕಾನೂನಿನ ಲೋಪದೋಷಗಳನ್ನು ವಿವರಿಸಬೇಕು ಎಂದು ಎ. ಐ ಟಿ. ಯು. ಸಿ ನ ಅಧ್ಯಕ್ಷರಾದ ಎಂ. ಸಿ. ನರಸಿಂಹನ್ ಹೇಳಿದರು. ಕಾರ್ಮಿಕ ಕಾನೂನುಗಳೆಲ್ಲ ಮಾಲೀಕರ ಪರವಾಗಿಯೇ ಇದೆ ಎಂದು ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಅರ್ಜುನದೇವ ಹೇಳಿದರು. ಕರ್ನಾಟಕ ಸರ್ಕಾರದ ಕಾರ್ಮಿಕ ಕಮೀಷನರ್ ನಾಗರಾಜ ಶೆಟ್ಟಿ ಅವರು ಮಾತನಾಡಿ, ಸಂವಿಧಾನದಿಂದ ಸಮಸ್ಯೆ ಬಗೆಹರಿಯುವ ಭರವಸೆ ನಮಗಿಲ್ಲ ಎಂದು ಮಾಲೀಕರು ಹೇಳುತ್ತಾರೆ ಎಂದರು.

ಅಗತ್ಯ ಸೇವಾ ಮಸೂದೆ ಒಂದು ಕರಾಳ ಶಾಸನ ಎಂದು ಡಾ. ಬಿ. ಕೆ. ಚಂದ್ರಶೇಖರ್ ಹೇಳಿ ಇಂಥ ಕಾನೂನು ಯಾವ ದೇಶದಲ್ಲೂ ಇಲ್ಲ ಎಂದರು. ಇಲ್ಲಿ ಸಂಘಟನೆ ಮಾಡಹೊರಟ ಕಾರ್ಮಿಕರು ಕೆಲಸವನ್ನೇ ಕಳೆದುಕೊಳ್ಳುತ್ತಾರೆ ಎಂದು ಹೇಳಿ, ಕೇರಳ ತ್ರಿಪುರ, ಪ. ಬಂಗಾಳಗಳಲ್ಲಿ ನಿಗದಿಯಾಗಿರುವ ಕೂಲಿದರಗಳನ್ನು ವಿವರಿಸಿದರು.

ಈ ಚರ್ಚಾಸಭೆಯ ಅಧ್ಯಕ್ಷತೆಯನ್ನು ಶ್ರೀ ಸುಬ್ರಮಣಿ ಅವರು ವಹಿಸಿದ್ದರು.

●

ಉಡುಪಿಯ ದುಡಿಯುವ ಜನತೆಯ ಸಮಾವೇಶ

ದ. ಕ. ಜಿಲ್ಲೆಯ ಉಡುಪಿ ಮತ್ತು ಸುತ್ತುಮುತ್ತಲಿನ ಹತ್ತುಹಲವು ರೈತ ಕಾರ್ಮಿಕ, ನೌಕರರ ಸಂಘಟನೆಗಳ ಒಕ್ಕೂಟವಾದ 'ಸಂಯುಕ್ತ ಕಾರ್ಮಿಕ ಕ್ರಿಯಾವೇದಿಕೆ'ಯ ಆಶ್ರಯದಲ್ಲಿ ದುಡಿಯುವ ಜನತೆಯ ಸಮಾವೇಶವೊಂದು ಇದೇ ತಾ. 29-6-1980ನೇ ರವಿವಾರದಂದು ಉಡುಪಿಯ ಸತ್ಯಮೂರ್ತಿ ಸ್ಮಾರಕ ಸಭಾಂಗಣದಲ್ಲಿ ಜರಗಿತು. ಸಮಾವೇಶದ ಅಧ್ಯಕ್ಷತೆಯನ್ನು ಉಡುಪಿಯ ನ್ಯಾಯವಾದಿ ಶ್ರೀ ಶ್ರೀಧರ ಕಲ್ಮಾಡಿ ಇವರು ವಹಿಸಿದ್ದರು. ಎಲ್ಲ ಜೀವನಾವಶ್ಯಕ ವಸ್ತುಗಳ ಬೆಲೆಏರಿಕೆ, ಉಡುಪಿಯ ದುಡಿಯುವ ಜನತೆಯನ್ನು ತೀವ್ರವಾಗಿ ಬಾಧಿಸುತ್ತಿರುವ ವಸತಿ ಸಮಸ್ಯೆ, ಕರ್ನಾಟಕ ಸರಕಾರ ಕಾರ್ಮಿಕ ವರ್ಗದ ಹಕ್ಕುಗಳನ್ನು ಮೊಟಕು ಮಾಡಲು ಜಾರಿಗೆ ತರಲು ಉದ್ದೇಶಿಸಿರುವ "ಅವಶ್ಯಕ ಸೇವಾ ನಿಯಂತ್ರಣ ಮಸೂದೆ", ಬೆಂಗಳೂರಿನ ಮೈಕೋ ಮತ್ತು ಐ. ಟಿ. ಸಿ. ಕಾರ್ಮಿಕ ನಾಯಕ ಶ್ರೀ ಸೂರ್ಯನಾರಾಯಣರಾವ್ ಮತ್ತಿತರರನ್ನು ಬೆಂಗಳೂರು ಜಿಲ್ಲೆಯಿಂದಲೇ ಗಡೀಪಾರು ಮಾಡುವ ಕರ್ನಾಟಕ ಸರಕಾರದ ಕ್ರಮ, ದೇಶದ ಪ್ರಸ್ತುತ ಆರ್ಥಿಕ ಬಿಕ್ಕಟ್ಟು ಮತ್ತು ಈ ಎಲ್ಲ ಸಮಸ್ಯೆಗಳ ವಿರುದ್ಧ ಕಾರ್ಮಿಕವರ್ಗದ ಐಕ್ಯ ಹೋರಾಟದ ಅಗತ್ಯ-ಇವೇ ಮುಂತಾದ ವಿಷಯಗಳ ಬಗ್ಗೆ ಸಮಾವೇಶದಲ್ಲಿ ಚಿಂತನೆ ನಡೆಯಿತು. ಸಮಾವೇಶದಲ್ಲಿ ಪಾಲುಗೊಂಡಿದ್ದ ಭಾಷಣಕಾರರು ಕರ್ನಾಟಕ ಸರಕಾರದ ಕಾರ್ಮಿಕರನ್ನು ದಮನಿಸುವ ಕ್ರಮಗಳನ್ನು ಖಂಡಿಸಿದರು. ನೌಕರರಲ್ಲಿಯೇ ಕಡಿಮೆ ಸಂಬಳದವರು ಹೆಚ್ಚು ಸಂಬಳದವರು ಎಂದು ವಿಭಜಿಸಿ ನೌಕರರ ಒಗ್ಗಟ್ಟನ್ನು ಮುರಿಯಲು ಪ್ರಯತ್ನಿಸುವ ವ್ಯವಸ್ಥೆಯ ಕುತಂತ್ರವನ್ನು ಬಯಲು ಮಾಡಿದರು. ನಮ್ಮ ದೇಶದ ನಿರುದ್ಯೋಗಿಗಳಲ್ಲಿ ಹೆಚ್ಚಿನವರು ರೈತ ಕಾರ್ಮಿಕ ನೌಕರರ ವರ್ಗದಿಂದಲೇ ಬಂದವರು ಮತ್ತು ಇವರನ್ನು ಸಾಕುವ ಹೊಣೆಯನ್ನೇನೂ ಸರಕಾರ ಹೊತ್ತಿಲ್ಲ ಎಂಬ ಸತ್ಯವನ್ನು ಮರೆಮಾಚಿ, ಹೆಚ್ಚು ಸಂಬಳ ಕೇಳುವ ಸಂಘಟಿತ ಕಾರ್ಮಿಕರ ವಿರುದ್ಧ ನಿರುದ್ಯೋಗಿಗಳನ್ನು ಎತ್ತಿಕಟ್ಟುವ ಆಳುವವರ್ಗದ ಕಪಟವನ್ನು ಭಾಷಣಕಾರರು ಖಂಡಿಸಿದರು.

ಕ್ರಿಯಾವೇದಿಕೆಯ ಸಂಚಾಲಕ ಹಾಗೂ ಉಡುಪಿ ವಿಮಾ ನೌಕರರ ಸಂಘದ ಕಾರ್ಯದರ್ಶಿ ಶ್ರೀ ಪಿ. ವಿಶ್ವನಾಥ ರೈ ಸಭಿಕರನ್ನು ಸಮಾವೇಶಕ್ಕೆ ಸ್ವಾಗತಿಸುತ್ತಾ, ಈ ಸಮಾವೇಶ ಕರೆದಿದ್ದರ ಹಿನ್ನೆಲೆ, ಔಚಿತ್ಯಗಳನ್ನು ಕುರಿತು ಹೇಳಿದರು. ದೇಶವನ್ನು ಆಳಿದ ಕಾಂಗ್ರೆಸ್ ಮತ್ತು ಜನತಾ ಪಕ್ಷ ಈಗ ಮತ್ತೆ ಅಧಿಕಾರಕ್ಕೆ ಬಂದಿರುವ ಅದೇ ಕಾಂಗ್ರೆಸ್ ಪಕ್ಷಗಳು ಕಾರ್ಮಿಕವರ್ಗವನ್ನು ವಂಚಿಸಿವೆ. ಮಾತ್ರವಲ್ಲ; ಕಾರ್ಮಿಕ ಸಂಘಟನೆಗಳ ಐಕ್ಯವನ್ನು ಮುರಿಯಲು ಪ್ರಯತ್ನಿಸಿವೆ. ಈ ಹಿನ್ನೆಲೆಯಲ್ಲಿ ರೈತ ಕಾರ್ಮಿಕರು ತಮ್ಮ ಒಗ್ಗಟ್ಟನ್ನು ಇನ್ನಷ್ಟು ಬಲಪಡಿಸಿ ಬರಲಿರುವ ಹೋರಾಟಗಳಿಗೆ ಸಿದ್ಧರಾಗದೆ ಅನ್ಯಮಾರ್ಗವೇ ಇಲ್ಲವೆಂದು ತಿಳಿಸಿದರು.

ದ. ಕ. ಜಿಲ್ಲೆ ಸಿ. ಐ. ಟಿ. ಯು. ನಾಯಕ ಶ್ರೀ ರಾಮಚಂದ್ರರಾವ್ ಅವರು ಮಾತನಾಡುತ್ತಾ ಕರ್ನಾಟಕ ಸರಕಾರದ ಅವಶ್ಯಕ ಸೇವಾ ಮಸೂದೆ ಮತ್ತು ಕಾರ್ಮಿಕ ಮುಖಂಡರ ಗಡೀಪಾರಿನ ಕ್ರಮಗಳನ್ನು ಪ್ರಸ್ತಾಪಿಸಿ ಕಾರ್ಮಿಕ ನಾಯಕರನ್ನು ಗೂಂಡಾಗಳೆಂದು ಪರಿಗಣಿಸುವ ಸರಕಾರದ ಮನೋಧರ್ಮವನ್ನು ಕಟುವಾಗಿ ಟೀಕಿಸಿದರು. ಎ. ಐ. ಟಿ. ಯು ಸಿ. ಪ್ರತಿನಿಧಿ ಶ್ರೀ ಸಿಂಪ್ಸನ್ ಸೋನ್ಸ್ ಅವರು ಮಾತನಾಡುತ್ತಾ ಟಾಟಾ, ಬಿರ್ಲಾ ಬಂಡವಾಳಶಾಹಿಗಳು ದಿನೇ ದಿನೇ ಬೆಳೆಯುತ್ತಿರುವಾಗ ಹೆಚ್ಚು ಹೆಚ್ಚು ಜನಸಾಮಾನ್ಯರು ಬಡತನದ ರೇಖೆಗಿಂತ ಕೆಳದೂಡಲ್ಪಡುತ್ತಿದ್ದಾರೆ. ಹಾಗಿದ್ದರೆ ಈ ವ್ಯವಸ್ಥೆ ಮತ್ತು ಈ ಸರಕಾರ ಯಾರ ಪರವಾಗಿದೆ? ಎಂದು ಪ್ರಶ್ನಿಸಿದರು.

ಭಾರತೀಯ ಮಜ್ದೂರ್ ಸಭಾದ ಶ್ರೀ ಕೊರಗಪ್ಪ ಸುವರ್ಣ ಅವರು ಕಾರ್ಮಿಕ ನಾಯಕರ ಗಡೀಪಾರು ಆಜ್ಞೆ, ಸರಕಾರದ ಕರಾಳ ಶಾಸನಗಳು, ಬಹುಸಂಖ್ಯಾತ ರೈತಕಾರ್ಮಿಕರ ತೀರ ಕೆಳಮಟ್ಟದ ವರಮಾನ ಈ ಹಿನ್ನೆಲೆಯಲ್ಲಿ ನಮ್ಮನ್ನು ಆಳುವ ಜನ ಈ ಮೂವತ್ತಮೂರು ವರುಷಗಳಿಂದಲೂ ಜಪಿಸುತ್ತಿರುವ ಸಮಾಜವಾದದ ನಾಟಕವನ್ನು ಅಳೆಯಬೇಕು ಎಂದರು.

ಮಂಗಳೂರಿನ ಎಲೆಕ್ಟ್ರಿಸಿಟಿ ಬೋರ್ಡ್ ನೌಕರರ ಸಂಘದ ನಾಯಕ ವಾಸುದೇವ ಬೋಳಾರ್ ಕರ್ನಾಟಕ ಸರಕಾರ ಜಾರಿಗೆ ತರಲು ಉದ್ದೇಶಿಸಿರುವ ಶಾಸನ ನಿಜಕ್ಕೂ ಎಷ್ಟು ಭಯಂಕರವಾದದ್ದು ಎಂಬುದನ್ನು, ಶಾಸನದ ಕಲಮುಗಳನ್ನು ಉಲ್ಲೇಖಿಸಿ ಸೋದಾಹರಣವಾಗಿ ವಿವರಿಸಿದರು. ಯಾವುದೇ ಕೆಲಸವನ್ನು ಅವಶ್ಯಕ ಸೇವೆ ಎಂದು ನಿರ್ಧರಿಸುವ, ಅಲ್ಲಿ ಮುಷ್ಕರ ನಿಷೇಧಿಸುವ, ವಾರಂಟು ಇಲ್ಲದೆ ಕಾರ್ಮಿಕ ನಾಯಕರನ್ನು ಬಂಧಿಸುವ ಅಧಿಕಾರವನ್ನು ಸರಕಾರಕ್ಕೆ ಕೊಡುವ ಈ ಶಾಸನ ತುರ್ತುಪರಿಸ್ಥಿತಿಯ ಮರಳಿಕೆಯೇ ಸರಿ. ತುರ್ತುಪರಿಸ್ಥಿತಿಯ ಸರ್ವಾಧಿಕಾರವನ್ನು ಒಂದು ಶಾಶ್ವತ ಸ್ಥಿತಿಯನ್ನಾಗಿರಿಸುವ ಸರಕಾರದ ಸಂಚನ್ನು ಕಾರ್ಮಿಕರು ಒಗ್ಗಟ್ಟಾಗಿ ವಿಫಲಗೊಳಿಸಬೇಕು ಎಂದರು. ರಾಜ್ಯ ಸರಕಾರೀ ನೌಕರರ ಸಂಘದ ಶ್ರೀ ಎಸ್. ಎಸ್. ತೋನ್ಸೆಯವರು ಸರಕಾರೀ ನೌಕರರಿಗೂ ಕಾರ್ಮಿಕ ಸಂಘಟನೆಯ ಹಕ್ಕುಗಳನ್ನು ಕೊಟ್ಟ ಪ. ಬಂಗಾಳ ಸರಕಾರದ ಕ್ರಮವನ್ನು ಶ್ಲಾಘಿಸಿ ಕರ್ನಾಟಕ ಸರಕಾರವು ಈ ಕ್ರಮ ಅನುಸರಿಸಲಿ ಎಂದು ಆಶ್ಲಾಘಿಸಿದರು.

ಸಿಂಡಿಕೇಟ್ ಬ್ಯಾಂಕ್ ಸ್ಟಾಫ್ ಯೂನಿಯನಿನ ಶ್ರೀ ರಮೇಶ್‌ರಾವ್, ಮುನಿಸಿಪಾಲಿಟಿ ಕೆಲಸಗಾರರ ಸಂಘದ ಶ್ರೀ ಭವಾನಿ ಶಂಕರ್‌ರಾವ್, ಉಡುಪಿ ರೈತಸಂಘದ ಪರವಾಗಿ ನ್ಯಾಯವಾದಿ ಯು. ಕೃಷ್ಣಮೂರ್ತಿ ಆಚಾರ್ಯ, ಯುವಜನ ಕೇಂದ್ರದ ಶ್ರೀ ಲಕ್ಷ್ಮಣ್, ಆಟೋ ರಿಕ್ಷಾ ಚಾಲಕರ ಶ್ರೀ ಶ್ರೀನಿವಾಸ ರಾವ್, ಬಾಡಿಗೆದಾರರ ಸಂಘದ ಶ್ರೀ ರಾಮಚಂದ್ರಭಟ್, ಜನರಲ್ ಇನ್ಷೂರೆನ್ಸ್ ನೌಕರರ ಸಂಘದ ಶ್ರೀ ಯು. ಪಿ. ಆಚಾರ್ಯ, ದ. ಕ. ಜಿಲ್ಲಾ ಹಂಚು ಕೆಲಸಗಾರರ ಸಂಘದ ಶ್ರೀ ಬಾಬುಬಂಗೇರ, ಅಂಚೆ-ತಂತಿ ಇಲಾಖೆಯ ಶ್ರೀ ಕೆ. ಜಿ ವಾರಂಬಳ್ಳಿ ಇವರೂ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಜುಲೈ 14 ರಂದು ಬೆಂಗಳೂರಿನಲ್ಲಿ ನಡೆಯಲಿರುವ ಕಾರ್ಮಿಕ ಸಂಘಟನೆಗಳ ಸಮಾವೇಶಕ್ಕೆ ವೇದಿಕೆಯ ಪ್ರತಿನಿಧಿಯಾಗಿ ಶ್ರೀ ವಿಶ್ವನಾಥರೈ ಅವರನ್ನು ಸಭೆ ಸರ್ವಾನುಮತಿಯಿಂದ ಆಯ್ಕೆಮಾಡಿತು.

ತಮ್ಮ ಅಧ್ಯಕ್ಷ ಭಾಷಣದಲ್ಲಿ ಶ್ರೀ ಶ್ರೀಧರ ಕಲ್ಮಾಡಿ ಅವರು ಸಂಯುಕ್ತ ಕಾರ್ಮಿಕ ಕ್ರಿಯಾವೇದಿಕೆಯನ್ನು ಕಟ್ಟಿದ ಕಾರ್ಯಕರ್ತರನ್ನು ಪ್ರಶಂಸಿಸಿ, ಹತ್ತುಹಲವು ಸಮಸ್ಯೆಗಳಿಂದ ಕಂಗೆಟ್ಟಿರುವ ಕಾರ್ಮಿಕ ವರ್ಗದ ಐಕ್ಯ ಹೋರಾಟಕ್ಕೆ ಇಂತಹ ವೇದಿಕೆಗಳು ಅಗತ್ಯವೆಂದು ಹೇಳಿದರು. ರೈತ ಕಾರ್ಮಿಕ, ನೌಕರರ ಐಕ್ಯ ನಮ್ಮ ಕಾಲದ ಆವಶ್ಯಕತೆಯಾಗಿದೆ ಎಂದು ಹೇಳಿ ಉಡುಪಿಯ ರೈತ ಕಾರ್ಮಿಕರ ಒಗ್ಗಟ್ಟು ಚಿರಕಾಲ ಉಳಿಯಲಿ ಎಂದು ಆಶಿಸಿದರು.

ಉಡುಪಿಯ ಎಲೆಕ್ಟ್ರಿಸಿಟಿ ಬೋರ್ಡಿನ ಶ್ರೀ ಭಾಸ್ಕರ ಶೆಟ್ಟಿ ಅವರು ಆಭಾರ ಮನ್ನಿಸಿದರು.

●

ಬೀಡಿ ಕೆಲಸಗಾರರಿಗೆ ಗ್ರಾಚ್ಯುಟಿ-ಮುಂಬಯಿ ಹೈಕೋರ್ಟ್ ನಿರ್ಣಯ

1966ರಲ್ಲಿ ಪಾಸಾದ ಬೀಡಿ ಮತ್ತು ಸಿಗಾರ ಕೆಲಸಗಾರರ ಕಾಯಿದೆಗನುಸಾರವಾಗಿ ಬೀಡಿ ಕೆಲಸಗಾರರಿಗೆ ಗ್ರಾಚ್ಯುಟಿ ಸಿಗಲೇಬೇಕೆಂಬ ತೀರ್ಪೊಂದನ್ನು ಮುಂಬಯಿ ಹೈಕೋರ್ಟು ನೀಡಿದೆ.

ಬಿ. ಎನ್. ಸರ್ದಾರ್ ಪ್ರೈವೇಟ್ ಲಿಮಿಟೆಡ್ ಕಂಪೆನಿ ಬೀಡಿ ತಯಾರಿಸುತ್ತಿದ್ದು, 20 ವರ್ಷ ಕೆಲಸಮಾಡಿದ ಕಾರ್ಮಿಕನೊಬ್ಬ ಡಿಸೆಂಬರ್ 1972 ರಲ್ಲಿ ರಾಜೀನಾಮೆಯಿತ್ತು ರೂ. 1200 ಗ್ರಾಚ್ಯುಟಿ ಬೇಡಿದ್ದ. ಬೀಡಿ ಮತ್ತು ಸಿಗಾರ ಕೆಲಸಗಾರರ (ಕೆಲಸ ಮಾಡುವ ಪರಿಸ್ಥಿತಿ) ಕಾಯಿದೆ, 1966 ರ ಕಲಂ 2 (ಎಫ್) ಪ್ರಕಾರ ಈತನು ಕಾರ್ಮಿಕನೆಂದೂ, ಇವನು ಕೆಲಸ ಮಾಡುವ ಸ್ಥಳ ಕಾರ್ಖಾನೆಯೆಂದೂ, ಆದ್ದರಿಂದ ಇವನಿಗೆ ರೂ. 1140 ಗ್ರಾಚ್ಯುಟಿ ಕೊಡಬೇಕೆಂದು ತೀರ್ಮಾನಿಸಿದ್ದರು. ಮಾಲಕರ ಮೇಲ್ಮನವಿ ಕೂಡ ತಿರಸ್ಕೃತವಾಯಿತು. ಅನಂತರ ಹೈಕೋರ್ಟಿಗೆ ಅಪೀಲು.

ಈ ಕಾರ್ಮಿಕ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿಲ್ಲೆಂದೂ, ಒಂದು ಸಂಸ್ಥೆಯಲ್ಲಿ ಈತ ಕೆಲಸಮಾಡುತ್ತಾನೆಂದೂ ಪರಿಗಣಿಸಿದರೂ ಕೂಡ, ಕೇಂದ್ರ ಸರಕಾರದ ಯಾವದೊಂದು ಕಾಯಿದೆಯೂ ಕೂಡ ಅವ ಕೆಲಸ ಮಾಡುತ್ತಿರುವ ಜಾಗವನ್ನು ಸಂಸ್ಥೆ ಎಂದು ಪರಿಗಣಿಸಿಲ್ಲವೆಂದು ಮಾಲಕರ ವಾದ.

ಗ್ರಾಚ್ಯುಟಿ ಕಾಯಿದೆಯ ಕಲಂ 1 (3) (ಬಿ)ಯು ಮಾಲಕನ ಸಂಸ್ಥೆ ಸೇರುತ್ತದೆಂದೂ, ಹೈಕೋರ್ಟು ನ್ಯಾಯಾಧೀಶನ ಅಂಬೋಣ. "ಸದ್ಯ ಜಾರಿಯಲ್ಲಿರುವ ಯಾವದೇ ಕಾಯಿದೆ" ಗೆ ಒಳಪಡುತ್ತದೆಂಬ ಅರ್ಥವನ್ನು ಈ ಕಲಂ ಸ್ಪಷ್ಟಪಡಿಸುತ್ತದೆ. ಮತ್ತು ಈ ಕಾಯಿದೆ ಎಲ್ಲ ಕಾರ್ಖಾನೆ-ಸಂಸ್ಥೆಗಳಿಗೂ ಸಂಬಂಧಪಡುತ್ತದೆಂದೂ, ಕೇಂದ್ರ ಅಥವಾ ರಾಜ್ಯಸರಕಾರದ ಕಾಯ್ದೆಗಳಾದರೆ ಮಾತ್ರ ಅದು ಸಂಬಂಧಪಡುತ್ತದೆಂದು ಹೇಳುವುದು ಸರಿಯಲ್ಲವೆಂಬುದನ್ನೂ ನ್ಯಾಯಾಧೀಶರು ಸ್ಪಷ್ಟಪಡಿಸಿದ್ದಾರೆ.

ಗ್ರಾಚ್ಯುಟಿ ಕಾಯಿದೆಯ ಕಲಂ 1(3)(ಬಿ) ಸಲುವಾಗಿ, ಒಂದು ರಾಜ್ಯದಲ್ಲಿ ಶಾಪ ಮತ್ತು ಸಂಸ್ಥೆ (shops and establishments) ಗಳ ಸಲುವಾಗಿ ಒಂದು ಕಾನೂನಿದ್ದರೆ ಸಾಕು. ಅದು ರಾಜ್ಯಸರಕಾರದ್ದೋ ಅಥವಾ ಕೇಂದ್ರದ್ದೋ ಸಂಬಂಧವಿಲ್ಲ. ಗ್ರಾಚ್ಯುಟಿ ಕಾಯಿದೆಯ ಕಲಂ 2 (ಇ)ಗೆ ಕೆಲಸಗಾರ ಸರಿಯಾದ ಉತ್ತರ ಕೊಟ್ಟರೆ, ಅವ ಯಾವದೇ ಕಾಯಿದೆಯ ಕೆಳಗೆ (ರಾಜ್ಯ ಅಥವಾ ಕೇಂದ್ರ) ಶಾಪ ಅಥವಾ ಸಂಸ್ಥೆಯಲ್ಲಿ ಕೆಲಸ ಮಾಡಲಿ ಅವನಿಗೆ ಗ್ರಾಚ್ಯುಟಿ ಸಿಗಲೇಬೇಕು.

ಈ ಕೇಸಿನಲ್ಲಿ ಶಾಪ ಮತ್ತು ಸಂಸ್ಥೆ ಕಾಯ್ದೆ ಸಂಬಂಧವಿಲ್ಲದಿದ್ದರೂ ಕೂಡ (ಯಾಕೆಂದರೆ ಈ ಕಾರ್ಖಾನೆ ಸ್ಥಳೀಯ ಪ್ರದೇಶದಲ್ಲಿಲ್ಲ) ಬೀಡಿ ಮತ್ತು ಸಿಗಾರ ತಯಾರಿಸುವವರ ಸಲುವಾಗಿಯೇ ಇರುವ ಬೀಡಿ ಮತ್ತು ಸಿಗಾರ ಕೆಲಸಗಾರರ ಕಾನೂನು ಇವರ ಸಲುವಾಗಿಯೇ ಜಾರಿಯಲ್ಲಿದೆ. ಗ್ರಾಚ್ಯುಟಿ ಕಾಯಿದೆಯ ಕಲಂ 1(3) (ಬಿ)ಯಲ್ಲಿ ತಿಳಿಸಿದಂಥ ಸಂಸ್ಥೆಗೆ ಈ ಕಾನೂನು ನೇರವಾಗಿ ಸಂಬಂಧಪಟ್ಟಿದೆ ಎಂದು ಹೈಕೋರ್ಟು ಅಭಿಪ್ರಾಯಪಟ್ಟು, ಮಾಲಕರ ಅರ್ಜಿಯನ್ನು ತಿರಸ್ಕರಿಸಿದೆ.

ಕರ್ನಾಟಕದ ಬೀಡಿಕಾರ್ಮಿಕರಿಗೆ ಈ ನಿರ್ಣಯ ಬಹಳ ಅನುಕೂಲವಾಗಬಹುದು, ಇದರ ಉಪಯೋಗವನ್ನು ಮಾಡಿಕೊಳ್ಳಬೇಕು.

○

ಐ.ಟಿ.ಸಿ. ಕಾರ್ಮಿಕನಿಗೆ ಪೋಲೀಸ್ ಚಿತ್ರಹಿಂಸೆ

ನಗರದ ಫ್ರೇಜರ್ ಟೌನ್ ಪೋಲೀಸರು ಇಂಡಿಯನ್ ಟೊಬಾಕೋ ಕಂಪೆನಿಯ ಕಾರ್ಮಿಕರಾದ ಶ್ರೀ ಗಂಗಾಧರನ್ ಅವರನ್ನು ಬಂಧಿಸಿ ಅವರಿಗೆ ಚಿತ್ರಹಿಂಸೆ ನೀಡಿದ್ದಾರೆ, ಅವರ ದೇಹದ ಮೇಲೆಲ್ಲಾ ಗಾಯಗಳಾಗಿದ್ದು ಅವರ ಎಡಗೈ ಮತ್ತು ಬಲಗಾಲಿನ ಮೂಳೆ ಮುರಿದಿದೆ, ಸಬ್ ಇನ್ಸ್‌ಪೆಕ್ಟರ್ ಪ್ರಕಾಶ್ ಇದಕ್ಕೆ ಕಾರಣರಾಗಿದ್ದಾರೆ.

ಈಗ ಗಂಗಾಧರನ್ ಅವರನ್ನು ಪೋಲೀಸರೇ ಬೌರಿಂಗ್ ಆಸ್ಪತ್ರೆಗೆ ಸೇರಿಸಿದ್ದಾರೆ. ಐ ಟಿ. ಸಿ. ವರ್ಕರ್ಸ್ ಯೂನಿಯನ್ ಪೋಲೀಸರ ಹೇಯ ಕೃತ್ಯವನ್ನು ಖಂಡಿಸಿ, ಸರ್ಕಾರ ಕಾರ್ಮಿಕನಿಗೆ ಪರಿಹಾರ ನೀಡಬೇಕೆಂದು ಒತ್ತಾಯಿಸಿದೆ.

ಪೋಲೀಸ್ ದೌರ್ಜನ್ಯಗಳು ಹಲವಾರು, ಅದೀಗ ಸಾಮಾನ್ಯವಾಗಿ ಬಿಟ್ಟಿದೆ, ಪೋಲೀಸರು ತಮ್ಮ ವರ್ತನೆಯ ಬಗ್ಗೆ ಜನತೆ ಉತ್ತರಿಸುವಂತೆ ಮಾಡಬೇಕೆಂದು ಐ. ಟಿ. ಸಿ. ಕಾರ್ಮಿಕ ಸಂಘದ ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್ ಹೇಳಿದ್ದಾರೆ.

●

ಚಂದಾ ವಿವರ

ಬಿಡಿಪ್ರತಿ	:	50 ಪೈಸೆ
6 ತಿಂಗಳಿಗೆ	:	13 ರೂ.
ಒಂದು ವರ್ಷಕ್ಕೆ	:	25 ರೂ.

ಆಧುನಿಕ ರಾಜಕೀಯ ಬೆಳವಣಿಗೆಯಲ್ಲಿ ಜಾತಿ, ವರ್ಗ ಮತ್ತು ಪಕ್ಷಗಳು

ಇ. ಎಂ. ಎಸ್. ನಂಬೂದಿರಿಪಾದ್

(ಹಿಂದಿನ ಸಂಚಿಕೆಯಿಂದ ಮುಂದು ವರಿದುದು)

ಈ ವಿಚಾರದ ಬಗ್ಗೆ ಹೇಳುವಾಗ, ಆಧುನೀಕರಣದ ಮತ್ತೊಂದು ಪ್ರಮುಖವಾದ ಅಂಶದ ಬಗ್ಗೆ ಹೇಳದೆ ಇರಲು ಸಾಧ್ಯವಿಲ್ಲ. ಸರ್ಕಾರಿ ಕೆಲಸಗಳ ಅವಕಾಶದಿಂದ ಮತ್ತು ಆಧುನಿಕ ಶಿಕ್ಷಣದಿಂದ ಲಾಭ ಪಡೆದ ಬುದ್ಧಿಜೀವಿಗಳು ಮತ್ತು ಅಧಿಕಾರಿಗಳ ಹೊಸ ವರ್ಗದ ರಚನೆಯು ಆಧುನಿಕ ವರ್ಗಸಮಾಜದ ಸ್ಥಾಪನೆಯ ಪ್ರಾರಂಭವಷ್ಟೆ, ಆಧುನಿಕ ಬುದ್ಧಿಜೀವಿಗಳು ಮತ್ತು ಅಧಿಕಾರಿಗಳನ್ನು ನೀಡಿದ ಜಾತಿ, ಉಪಜಾತಿ ಮತ್ತು ಕೋಮುಗಳಿಂದಲೇ ಹೊಸ ಬೂರ್ಜ್ವಾ ವರ್ಗವೊಂದು ಆ ಪದದ ಆರ್ಥಿಕ ಅರ್ಥದಲ್ಲಿ ಹುಟ್ಟಿಕೊಂಡಿತು, ಬಂಗಾಳ, ಮುಂಬಯಿ, ಮದ್ರಾಸುಗಳದ್ದಕ್ಕಿಂತ ಕಡಿಮೆ ಪ್ರಮಾಣದಲ್ಲಿದ್ದರೂ ಕೇರದಲ್ಲಿಯೂ ಕೂಡ ಹೊಸ ಮಾಲೀಕವರ್ಗ ಒಂದು ಹೊಸ ರೂಪವನ್ನು ಪಡೆಯಲು ಪ್ರಾರಂಭಿಸಿತು. ಕಾರ್ಖಾನೆಗಳ ಸ್ಥಾಪನೆ, ಪ್ಲಾಂಟೇಷನ್‌ಗಳ ವ್ಯವಸ್ಥೆ, ವ್ಯವಸಾಯ ಮತ್ತು ಕೈಗಾರಿಕೆಯಲ್ಲಿ ತಂತ್ರಗಳ ಬಳಕೆ, ಭೂಮಿತಿಯಲ್ಲಿ ಸುಧಾರಣೆಗಳು, ಕುಟುಂಬದ ಆಸ್ತಿ ವಿತರಣೆ ಕಾಯಿದೆಯಲ್ಲಿ ಬದಲಾವಣೆ, ಇವೆಲ್ಲವೂ ಹೊಸವರ್ಗ ಅಂದರೆ ಬೂರ್ಜ್ವಾ ವರ್ಗವು ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮಾತ್ರವಲ್ಲ ಆರ್ಥಿಕವಾಗಿಯೂ ಹುಟ್ಟು ಪಡೆಯುವುದಕ್ಕೆ ಸಹಾಯ ಮಾಡಿದವು. ಈ ಕಾರ್ಯವಿಧಾನವು 19ನೇ ಶ.ದ ಪ್ರಾರಂಭ ದಶಕದಲ್ಲಿ ಪ್ರಾರಂಭವಾಯಿತಾದರೂ ಮೊದಲ ಮಹಾಯುದ್ಧದ ಸಮಯದಲ್ಲಿ ಮತ್ತು ಅದರ ನಂತರ ತೀವ್ರವಾಗಿ ಬೆಳೆಯಿತು,

ಈ ಬೂರ್ಜ್ವಾ ವರ್ಗದ ಹುಟ್ಟುವಿಕೆಯ ಅನಿವಾರ್ಯ ಪರಿಣಾಮವಾಗಿ ಕಾರ್ಮಿಕ ಮತ್ತು ಅರೆಕಾರ್ಮಿಕ ವರ್ಗ ರೂಪುಗೊಂಡಿತು. ಬೂರ್ಜ್ವಾ ವರ್ಗವು ಬೂರ್ಜ್ವಾ ವರ್ಗಕ್ಕೆ ಸಂಪೂರ್ಣ ಪರಿವರ್ತನೆ ಹೊಂದುವುದರಲ್ಲಿ, ಆಧುನಿಕ ಭೂ ಸಂಬಂಧ ಮತ್ತು ಉತ್ಪಾದನೆಯಲ್ಲಿ, ಆಧುನಿಕ ತಂತ್ರವನ್ನು ಬಳಸಿ ಬೆಳೆಯುತ್ತಿರುವ ಭೂಮಾಲೀಕ ಮತ್ತು ಶ್ರೀಮಂತ ರೈತವರ್ಗದ ಬೆಳವಣಿಗೆಯಲ್ಲಿ ತೀವ್ರ ಆಸಕ್ತಿಯನ್ನು ತಳೆದಿತ್ತು, ವ್ಯಾಪಾರೀ ಮತ್ತು ಕೈಗಾರಿಕಾ ಬೂರ್ಜ್ವಾ ವರ್ಗವನ್ನು ಬಲಪಡಿಸಲೂ ಈ ವರ್ಗ ಶ್ರಮಿಸಿತು. ಇನ್ನೊಂದು ಕಡೆ ಕಾರ್ಮಿಕ ಮತ್ತು ಅರೆಕಾರ್ಮಿಕ ವರ್ಗ ಈ ಬೂರ್ಜ್ವಾ ವರ್ಗದವರ ವಿರುದ್ಧ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಆಸಕ್ತಿ ಹೊಂದಿದ್ದರು,

ಈ ಎರಡೂ ವರ್ಗಗಳಲ್ಲಿಯೂ ಹೆಚ್ಚು ಕಡಿಮೆ ಎಲ್ಲಾ ಜಾತಿಯಿಂದ ಬಂದ ಜನಗಳೂ ಇದ್ದರು. (ಬಹುಶಃ ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳು ತೀರ ಹಿಂದುಳಿದವರಾಗಿರಲಿಲ್ಲ.) ಪರಿಶಿಷ್ಟ ಜಾತಿ ಮತ್ತು ವರ್ಗಗಳಲ್ಲಿ ಬೂರ್ಜ್ವಾ ವರ್ಗವು ಆರ್ಥಿಕವಾಗಿ ಬೆಳವಣಿಗೆ ಪಡೆದದ್ದು ತೀರ ಕಡಿಮೆ ಅಥವಾ ಇಲ್ಲವೇ ಇಲ್ಲ ಅನ್ನಬಹುದು; ಅವರಲ್ಲಿ ಶೈಕ್ಷಣಿಕವಾಗಿ ಮುಂದೆ ಬಂದವರು ಮಾತ್ರ ಬೂರ್ಜ್ವಾಗಳಾಗಿ ಬೆಳೆದ ರಷ್ಟೆ.) ಆದ್ದರಿಂದ ಪೂರ್ವ ಬ್ರಿಟಿಷ್ ಸಮಾಜದಲ್ಲಿದ್ದಂತೆ ಸಾಮಾಜಿಕ ಘರ್ಷಣೆಯು ಕೇವಲ ಜಾತಿ, ಉಪಜಾತಿ ಮತ್ತು ಧಾರ್ಮಿಕ ಕೋಮುಗಳ ಆಧಾರದ ಮೇಲೆಯೇ ನಡೆಯಿತು, ಬೂರ್ಜ್ವಾ ಭೂಮಾಲೀಕ ಮತ್ತು ಕಾರ್ಮಿಕ ಅರೆಕಾರ್ಮಿಕ ರೈತವರ್ಗಗಳಲ್ಲಿ ಪ್ರತಿಯೊಂದು ಜಾತಿ, ಉಪಜಾತಿ ಮತ್ತು ಧಾರ್ಮಿಕ ಕೋಮು ತನ್ನದೇ ಆದ ಪಾತ್ರವನ್ನು (ಕೆಲವು ಹೆಚ್ಚು ಕೆಲವು ಕಡಿಮೆ) ವಹಿಸಿತು, ಹೀಗೆ ಮುಖ್ಯವಾಗಿ ಜಾತಿಬದ್ಧವಾದ ಸಮಾಜದ ಚೌಕಟ್ಟಿನಲ್ಲಿಯೇ ವರ್ಗಸಮಾಜವೂ ಹುಟ್ಟಿಕೊಳ್ಳುತ್ತಿತ್ತು. ಎರಡು ಪ್ರಮುಖ ವರ್ಗಗಳ ನಡುವಿನ ಹೋರಾಟಗಳು

ಆರ್ಥಿಕ ವಿಭಾಗಗಳಾಗಿ ಬೂರ್ಜ್ವಾ ಮತ್ತು ಕಾರ್ಮಿಕ ವರ್ಗ

ಮತ್ತು ಬೇರೆ ಬೇರೆ ಜಾತಿ, ಉಪಜಾತಿ ಮತ್ತು ಧಾರ್ಮಿಕ ಕೋಮುಗಳ ನಡುವಿನ ಘರ್ಷಣೆಗಳು ಒಂದರೊಡನೊಂದು ಬೆರೆತುಕೊಳ್ಳುತ್ತಿದ್ದವು. ಆದ್ದರಿಂದ ಇದನ್ನು ಪೂರ್ಣವಾಗಿ ಜಾತಿ ಹೋರಾಟ ಎಂದೋ ಅಥವಾ ವರ್ಗಹೋರಾಟ ಎಂದೋ ಹೇಳುವುದು ಅವಾಸ್ತವವಾಗುತ್ತದೆ. ಮುಖ್ಯವಾಗಿ ಇಲ್ಲಿರುವುದು ಜಾತಿ ಮತ್ತು ವರ್ಗಗಳು ಒಂದರೊಳಗೊಂದು ಪ್ರವೇಶಿಸಿರುವುದು.

ಈ ಬೆಳವಣಿಗೆಗಳು ಆಧುನಿಕ ರಾಜಕೀಯ ಪಕ್ಷಗಳು ಮತ್ತು ಕಾರ್ಮಿಕ ಅರೆಕಾರ್ಮಿಕ ಸಾಮೂಹಿಕ ಸಂಘಟನೆಗಳ ಉದಯಕ್ಕೆ ಒಂದು ತಳಹದಿಯನ್ನು ಸಿದ್ಧಮಾಡಿದವು. ಆದರೆ ಈ ವಿಚಾರದಲ್ಲಿ ಭಾರತದ ಉಳಿದ ರಾಜ್ಯಗಳಿಗಿಂತ ಕೇರಳ ಹಿಂದೆ ಉಳಿದಿತ್ತು,

ಭಾರತದ ಬೂರ್ಜ್ವಾ ವರ್ಗದ ಪ್ರಧಾನ ರಾಜಕೀಯ ಪಕ್ಷವಾದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ 19ನೇ ಶ.ದ ಕೊನೆಯ ಭಾಗದಲ್ಲಿ ಸ್ಥಾಪನೆಯಾಯಿತು. ಆದರೆ ಕೇರಳದಲ್ಲಿ ಮಾತ್ರ ಇದು ರೂಪಕ್ಕೆ ಬಂದದ್ದು ಮೊದಲ ಮಹಾಯುದ್ಧದ ಕೊನೆಯಲ್ಲಿ; ಅದರಲ್ಲಿಯೂ ಬ್ರಿಟಿಷರು ಆಡಳಿತ ನಿರ್ವಹಿಸುತ್ತಿದ್ದ ಮಲಬಾರ್ ಭಾಗದಲ್ಲಿ ಮಾತ್ರ, ಅನಿಬೆಸೆಂಟ್ ರಚಿಸಿದ ಹೋಮ್‌ರೂಲ್ ಲೀಗ್ ಸಂಸ್ಥೆಯ ಶಾಖೆಗಳು ಮಲಬಾರ್‌ನಲ್ಲಿ ಸ್ಥಾಪಿತಗೊಂಡವು. ಇದಾದ ಮೇಲೆ ಯುದ್ಧಾನಂತರದ ವರ್ಷಗಳಲ್ಲಿ ಸ್ವಾತಂತ್ರ ಹೋರಾಟದಲ್ಲಿ ಮಹಾತ್ಮಗಾಂಧಿ ಉನ್ನತ ನಾಯಕರಾಗಿ ರೂಪುಗೊಂಡರು. ಈ ಹಂತದಲ್ಲಿ ಕಾಂಗ್ರೆಸ್ ಕೇರಳದ ಜನತೆಯಲ್ಲಿ ನೆಲೆಗಳನ್ನು ಕಂಡುಕೊಂಡಿತು. ಇದೂ ಅಗ ಮಲಬಾರ್ ಭಾಗಕ್ಕೆ ಮಾತ್ರ ಸೀಮಿತವಾಗಿತ್ತು. ರಾಜ ಸಂಸ್ಥಾನಗಳಾದ ಕೊಚ್ಚಿನ್ ಮತ್ತು ತಿರುವಾಂಕೂರುಗಳು ಮಾತ್ರ ಕಾಂಗ್ರೆಸ್ ಚಳುವಳಿಯ ಹಿಡಿತಕ್ಕೆ ಸಿಕ್ಕಲಿಲ್ಲ. ಅದಕ್ಕೆ ಕಾರಣವೆಂದರೆ "ರಾಜ ಸಂಸ್ಥಾನಗಳ ಆಂತರಿಕ ವಿಚಾರಗಳಲ್ಲಿ ಪ್ರವೇಶ ಮಾಡದಿರುವ ಗಾಂಧೀ ತತ್ವ.

ಬೂರ್ಜ್ವಾ ವರ್ಗದ ರಾಜಕೀಯ ಪಕ್ಷಕ್ಕೆ ಸಂಬಂಧಿಸಿದ ಸ್ಥಿತಿಯೇ ಹೀಗಿರಬೇಕಾದಲ್ಲಿ ಕಾರ್ಮಿಕ ವರ್ಗದ ಪಕ್ಷವಾದ ಕಮ್ಯುನಿಸ್ಟ್ ಪಕ್ಷವು ಇಲ್ಲಿ ಹುಟ್ಟಿ ನೆಲೆಗೊಳ್ಳುವುದಕ್ಕೆ ಇನ್ನೂ ಹೆಚ್ಚು ಕಾಲ ತೆಗೆದುಕೊಂಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಭಾರತದ ಕಮ್ಯುನಿಸ್ಟ್ ಪಕ್ಷವು 1920ರಲ್ಲಿ ಹುಟ್ಟಿದರೆ, ಕೇರಳದಲ್ಲಿ ಅದರ ಶಾಖೆ ತೆರೆಯಲು 1930ರಲ್ಲಿ ಮಾತ್ರ ಸಾಧ್ಯವಾಯಿತು.

ಜಾತಿ ಆಧಾರಿತ ಹೋರಾಟಗಳು ಮತ್ತು ಸಂಸ್ಥೆಗಳು :

ಕೇರಳಕ್ಕೂ ಮತ್ತು ಭಾರತದಉಳಿದ ಪ್ರದೇಶಗಳಿಗೂ ಇರುವ ಇನ್ನೊಂದು ಮುಖ್ಯ ವ್ಯತ್ಯಾಸವೆಂದರೆ ರಾಜಕೀಯ ಹೋರಾಟ ಮತ್ತು ಅದನ್ನು ನಡೆಸುವ ಸಂಘಟನೆಗಳ ಮೊದಲ ರೂಪವು ಕೇರಳದಲ್ಲಿ ಒಂದು ನಿರ್ದಿಷ್ಟ ಜಾತಿ, ಉಪಜಾತಿ ಮತ್ತು ಧಾರ್ಮಿಕ ಕೋಮಿನ ಹೋರಾಟ ಮತ್ತು ಅದನ್ನು ನಡೆಸುವ ಸಂಘಟನೆಗಳೇ ಆಗಿತ್ತು, ತಿರುವಾಂಕೂರಿನಲ್ಲಿದ್ದ ಬ್ರಾಹ್ಮಣರ ಮೇಲುಗೈ ಬಗ್ಗೆ, ಬೇರೆ ಕೋಮುಗಳ ಅಸಮಾಧಾನವು ಮಲೆಯಾಳಿ ಸ್ಮಾರಕ ಎಂದು ಹೆಸರಾಗಿರುವುದರಲ್ಲಿ ಅಭಿವ್ಯಕ್ತಿಯನ್ನು ಪಡೆಯಿತು. ಹಿಂದೂಗಳಲ್ಲದವರಿಗಿದ್ದ ಅತೃಪ್ತಿಯು ಮಹಾರಾಜರಲ್ಲಿ ವೈಯಕ್ತಿಕ ಮೊಕದ್ದಮೆಗಳನ್ನು ಹೂಡುವುದರಲ್ಲಿ ಮತ್ತು ಆನಂತರ ಹಿಂದುಳಿದ ಹಿಂದೂ ಜಾತಿಗಳ ಸಾಮೂಹಿಕ ಕ್ರಿಯೆಯಾಗಿ ಅಭಿವ್ಯಕ್ತಿಯನ್ನು ಪಡೆಯಿತು. ಬ್ರಾಹ್ಮಣರ ಮೇಲುಗೈ ಇದ್ದ ಪ್ರಾಂತದಲ್ಲಿ ಸುಮಾರು ಮುಂದುವರೆದ ಜನಾಂಗವಾದ ನಾಯ್ಕರ್‌ಗಳದ್ದೂ ಕೆಲವು ದೂರುಗಳು ಇದ್ದವು; ಅವರೂ ಕೂಡ ತಮ್ಮ ಅಸಮಾಧಾನಕ್ಕೆ ಅಭಿವ್ಯಕ್ತಿಯನ್ನು ಕೊಟ್ಟರು.

ಈ ಎಲ್ಲಾ ಹೋರಾಟಗಳೂ ಮತ್ತು ಚಳುವಳಿಗಳೂ ತಮ್ಮ ವೇದಿಕೆಗಳಿಂದ ರೂಪಿಸಲ್ಪಟ್ಟ ನಿರ್ದಿಷ್ಟವಾದ ರಾಜಕೀಯ ಬೇಡಿಕೆಗಳನ್ನು ಹೊಂದಿದ್ದ ಜಾತಿ ಸಂಘಟನೆಗಳ ಹುಟ್ಟಿಗೆ ದಾರಿ ಮಾಡಿದವು. ಇವುಗಳಲ್ಲಿ ಯಾವುದನ್ನೂ ಆಧುನಿಕ ಪ್ರಜಾಸತ್ತಾತ್ಮಕ ರಾಜಕೀಯ ಚಳುವಳಿಯ ಅಂಗವೆಂದು ಪರಿಗಣಿಸಲು ಸಾಧ್ಯವಿಲ್ಲ. ಏಕೆಂದರೆ ಅವರ ಬೇಡಿಕೆಗಳೆಲ್ಲವೂ ಒಂದು ನಿರ್ದಿಷ್ಟ ಕೋಮುಗಳ ದನಿಯಾಗಿತ್ತೇ ಹೊರತು ಅವು ಒಟ್ಟು ಜನತೆಯನ್ನು ಪ್ರತಿನಿಧಿಸುತ್ತಿರಲಿಲ್ಲ. ಬೇರೆ ಬೇರೆ ಕೋಮುಗಳಿಗೆ ಶೈಕ್ಷಣಿಕ ಮುನ್ನಡೆಗೆ ಅವಕಾಶ, ಸರ್ಕಾರಿ ನೌಕರಿಯಲ್ಲಿ ಪಾಲು, ಮುಂತಾದ ಬೇಡಿಕೆಗಳಿದ್ದವೇ ಹೊರತು ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹೋರಾಟ ಇರಲಿಲ್ಲ. ತುಂಬಾ ಅತೃಪ್ತಿಯ ಬೇಗೆಯಲ್ಲಿ ಬೇಯುತ್ತಿದ್ದ ಸಾಮಾನ್ಯ ಜನತೆಯು ಕಂಡುಕೊಂಡ ಅಭಿವ್ಯಕ್ತಿ ರೂಪದ ಮೊದಲ ಸ್ಥಿತಿ ಹೀಗಿತ್ತು.

ವಾಸ್ತವವಾಗಿ, ಜಾತಿ ಆಧಾರದ ಮೇಲೆ ನಿಂತಿದ್ದ ಈ ಸಂಸ್ಥೆ ತಮ್ಮ ಬಾಹ್ಯ ಸ್ವರೂಪದಲ್ಲಿ ಸಮಾಜ ಸುಧಾರಣಾ ಸಂಸ್ಥೆಗಳಂತೆ ಇದ್ದುವೇ ಹೊರತು ಪ್ರಜಾಸತ್ತಾತ್ಮಕ ರಾಜಕೀಯ ಪಕ್ಷಗಳಾಗಿ ಕಾಣುತ್ತಿರಲಿಲ್ಲ. ಇವುಗಳಲ್ಲಿ ತುಂಬಾ ವಿಸ್ತಾರವಾದ ಮತ್ತು ಬಲವತ್ತಾದ ಸಂಸ್ಥೆ ಎಂದರೆ ಎಸ್.ಎನ್.ಡಿ.ಪಿ. ಯೋಗಮ್. ಈ ಸಂಸ್ಥೆ ಹಿಂದೂಗಳಲ್ಲದ ಕೋಮಿನವರ ಕಷ್ಟಗಳಿಗೆ ಮತ್ತು ಬೇಡಿಕೆಗಳಿಗೆ ಅದರಲ್ಲಿಯೂ ಹೆಚ್ಚು ಮುಂದುವರೆದಿದ್ದ ಎಳವಾಗಳಿಗೆ ಧ್ವನಿ ಕೊಟ್ಟಿತು. ಈ ಸಂಸ್ಥೆಯು ಬಾಹ್ಯರೂಪದಲ್ಲಿ ಸಂತ ನಾರಾಯಣಗುರುವಿನಿಂದ ಸ್ಫೂರ್ತಿ ಪಡೆದು ಅವನ ನೇತೃತ್ವದ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣಾ ಸಂಸ್ಥೆಯಾಗಿತ್ತು. ಇದು ರಾಮಮೋಹನರ ಬ್ರಹ್ಮಸಮಾಜದ ಅಂಶಗಳು, ರಾಮಕೃಷ್ಣ, ವಿವೇಕಾನಂದರ ತಾತ್ವಿಕ ವಿಚಾರಗಳು, ಅಸ್ಪೃಶ್ಯತೆಯ ವಿರುದ್ಧ ಹೋರಾಟ ನಡೆಸಿದ ಜ್ಯೋತಿ ಬಾಪುಲೆ ಅವರ ತತ್ವಗಳು ಎಲ್ಲವನ್ನು ಒಳಗೊಂಡಿತ್ತು. ಆದರ ಹಿನ್ನೆಲೆಯಲ್ಲಿ ಇದು ತಮ್ಮ ತೊಂದರೆ ನಿವಾರಣೆಗೆ ಒಂದು ದಾರಿಯನ್ನು ಹುಡುಕುತ್ತಿದ್ದ ರೈತರು, ಹೊಸದಾಗಿ ಹುಟ್ಟುತ್ತಿದ್ದ ದೈಹಿಕ ಶ್ರಮದ ಕೂಲಿಗಳು, ಕುಶಲಕರ್ಮಿಗಳು ಮತ್ತು ಮಧ್ಯಮವರ್ಗದ ನೌಕರರು ಮುಂತಾದ ಸಾಮಾನ್ಯ ಜನತೆಯ ಅಭಿವ್ಯಕ್ತಿಯಾಗಿತ್ತು. ಇದರ ಹಿಂದೆ ಮತ್ತು ನಂತರ ಅನೇಕ ಹೋರಾಟಗಳು ಮತ್ತು ಚಳುವಳಿಗಳು ನಿರ್ದಿಷ್ಟ ಜಾತಿ, ಉಪಜಾತಿ ಮತ್ತು ಧಾರ್ಮಿಕ ಕೋಮುಗಳಿಗೆ ಸೀಮಿತಗೊಂಡಿದ್ದರಿಂದ ತಮ್ಮ ಕಷ್ಟಗಳನ್ನು ಎಲ್ಲ ರೂಪಗಳಲ್ಲಿ ಹೊರಗೆಡಹುವುದಕ್ಕೆ ಒಂದು ಮಾದರಿಯೇ ಆಯಿತು. ಈ ರೀತಿಯ ಸಾಮಾಜಿಕ ರಾಜಕೀಯ ಚಳುವಳಿಯ ಜೊತೆಯಲ್ಲೇ ರಾಜಕೀಯ ಸುದ್ದಿ ಮತ್ತು ರಾಜಕೀಯ ಆಲೋಚನೆಗಳನ್ನು ಹೊರಗೆಡಹುವ ಪತ್ರಿಕೆಗಳು ಹುಟ್ಟಿಕೊಂಡವು. ಪುಸ್ತಕ ಪ್ರಕಟಣೆ, ಮಾಸಿಕ, ದಿನ ವಾರ್ತಾಪತ್ರಿಕೆಗಳು ಹೀಗೆ ಆಧುನಿಕ ಪತ್ರಿಕೋದ್ಯಮ 19 ಶ. ದಷ್ಟು ಹಳೆಯದಾಗಿದ್ದರೂ, ರಾಜಕೀಯ ಹೋರಾಟದ ತೀವ್ರತೆಗಳನ್ನು ಒಳಗೊಂಡ ಸುದ್ದಿಪತ್ರಿಕೆಗಳು ಬಂದದ್ದು 20ನೇ ಶ. ದ ಪ್ರಾರಂಭದಲ್ಲಷ್ಟೆ. ಅದರಲ್ಲಿಯೂ ತಿರುವನಂತಪುರದಲ್ಲಿ ರಾಮಕೃಷ್ಣ ಪಿಳ್ಳೆಯವರ "ಸ್ವದೇಶಾಭಿಮಾನಿ"ಯಂಥ ಕೆಲವು ಉದಾಹರಣೆಗಳಿವೆ. 20ನೇಶ.ದ ಆರಂಭದಲ್ಲಿ ಹೊರಟ ಈ ಪತ್ರಿಕೆ ಕೊನೆಯಲ್ಲಿ ದಿವಾನರ ಆಡಳಿತದ ದಬ್ಬಾಳಿಕೆಯಲ್ಲಿ ನಿಂತುಹೋಯಿತು. ಈ ಪತ್ರಿಕೆ ಮತ್ತು ಇವರ ಸಂಪಾದಕರು ಗಾಂಧಿಯವರ ಅಸಹಕಾರ ಚಳುವಳಿಗೆ ದಶಕದಷ್ಟು ಹಿಂದೆಯೇ ಕೇರಳದಲ್ಲಿ ಆಧುನಿಕ ರಾಜಕೀಯ ಪತ್ರಿಕೋದ್ಯಮದ ದಾರಿದೀಪವಾದರು.

ಈ ಮೇಲೆ ತಿಳಿಸಿದ ಅಂಶಗಳು ಬಹುಮಟ್ಟಿಗೆ ತಿರುವನಂತಪುರಕ್ಕೆ ಅನ್ವಯವಾಗುವಂತಹುದು. ಆಗ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ಮಲಬಾರ್ ರಾಜ್ಯದಲ್ಲಿ ಇದೇ ರೀತಿಯ ಹೋರಾಟ, ಚಳುವಳಿ ಮತ್ತು ಸಂಸ್ಥೆಗಳು ಬೆಳೆಯಲಿಲ್ಲ. ಎಸ್.ಎನ್.ಡಿ ಪಿ. ಯೋಗಮ್ ಸಂಸ್ಥೆಯನ್ನು ಸ್ಥಾಪಿಸಿದ ಶ್ರೀ ನಾರಾಯಣಗುರು ಈಗಿನ ಕೇರಳದ ಭಾಗವಾದ ಮಲಬಾರ್‌ದಲ್ಲಿಯೂ ಕೆಲವು ದೇವಸ್ಥಾನಗಳನ್ನು ಸ್ಥಾಪಿಸಿದರೂ ಈ ಸಂಸ್ಥೆ ತಿರುವಾಂಕೂರಿಗೆ ಮಾತ್ರ ಸೀಮಿತಗೊಂಡಿತ್ತು. ಹಳೆಯ ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ರೀತಿಯ ತೊಂದರೆಗಳಿಗೆ ಒಳಗಾಗಿದ್ದ ಹಿಂದೂ ಜಾತಿಗೆ ಸೇರದವರು ಮತ್ತು ಇತರ ಕೋಮುಗಳು ಮದರಾಸಿನಲ್ಲಿ ಜಸ್ಟಿಸ್ ಪಕ್ಷದ ರಚನೆಯವರೆಗೂ ಕಾಯಬೇಕಾಯಿತು. ಇದರ ಶಾಖೆಗಳು ಮದ್ರಾಸ್‌ನಲ್ಲಿಯೂ ರಚನೆಯಾದವು, ಆಧುನಿಕ ಬೂರ್ಜ್ವಾ ಪ್ರಜಾಸತ್ತಾತ್ಮಕ ರಾಜಕೀಯ ಚಳುವಳಿಯ ಮಹಾನೇತಾರನಾಗಿ ಮಹಾತ್ಮಗಾಂಧಿ ರೂಪುಗೊಂಡದ್ದನ್ನು ಕಂಡ ಮಹಾಯುದ್ಧಾನಂತರದ ವರ್ಷಗಳಲ್ಲಿ ನಡೆದ ಅಗಾಧ ರಾಷ್ಟ್ರೀಯ ಉತ್ಕ್ರಾಂತಿಯ ಮುಂದೆ ಇವೆಲ್ಲ ಮಸುಕಾದವು.

(ಮುಂದುವರೆಯುವುದು)

ಸಿಟಿಬಸ್ ದರ ಏರಿಕೆಯ ವಿರುದ್ಧ ಮಂಗಳೂರಿನ ಕಾರ್ಮಿಕರ ಹೋರಾಟ

ಜುಲೈ 11, 1980 ದಕ್ಷಿಣ ಕನ್ನಡ ಜಿಲ್ಲೆಯ ದುಡಿಯುವ ಜನರ ಹೋರಾಟದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ. ಜಿಲ್ಲೆಯ ನಾನಾ ಭಾಗಗಳಿಂದ ಬಂದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪ್ರಮುಖ ಕಾರ್ಯಕರ್ತರೊಡಗೂಡಿ, ಒಂದು ಸಾವಿರಕ್ಕೂ ಮೇಲ್ಪಟ್ಟು ಮಂಗಳೂರಿನ ಕಾರ್ಯಕರ್ತರು ನಗರದಲ್ಲಿ ಸಿಟಿ ಬಸ್ಸುಗಳ ಮುಂದೆ ಶಾಂತಿಯುತವಾದ ಪಿಕೆಟಿಂಗ್ ನಡೆಸಿದರು. ಜೂನ್ 29ರಿಂದ ಏಕಪಕ್ಷೀಯವಾಗಿ ಬಸ್‌ಮಾಲಕರು ಮಂಗಳೂರಿನ ಸಿಟಿಬಸ್ ದರಗಳನ್ನು ವಿಪರೀತವಾಗಿ ಏರಿಸಿದುದರ ವಿರುದ್ಧ ಪ್ರತಿಭಟಿಸಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ದ. ಕ. ಜಿಲ್ಲಾ ಸಮಿತಿಯು ಸಾಮೂಹಿಕ ಪಿಕೆಟಿಂಗ್ ನಡೆಸಲು ಕರೆನೀಡಿತ್ತು. ಅತ್ಯಂತ ಶಾಂತಿಯುತವಾಗಿ ನಡೆದ ಪಿಕೆಟಿಂಗ್ ಕಾರ್ಯಕ್ರಮವನ್ನು ಕೆಡಿಸಲು ಬಸ್ ಮಾಲಕರು ಸತತವಾಗಿ ಪ್ರಯತ್ನ ನಡೆಸಿದರು. ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ವ್ಯಾನಿನಲ್ಲಿ ತುಂಬುವ ಅವಕಾಶವನ್ನೇ ಉಪಯೋಗಿಸಿ ಪಕ್ಕನೆ ಕೆಲವು ಬಸ್ಸುಗಳನ್ನು ಓಡಿಸಲು ಅವರು ಪ್ರಯತ್ನಿಸಿದರು. ಆದರೆ ಯಾವ ಪ್ರಚೋದನೆಗೂ ಬಲಿಬೀಳದೆ ಸತ್ಯಾಗ್ರಹಿ ಕಾರ್ಯಕರ್ತರು ಅತ್ಯಂತ ಸಹನೆ ಮತ್ತು ಶಿಸ್ತಿನಿಂದ ವರ್ತಿಸಿ, ಇಡೀನಗರದ ಜನಸಾಮಾನ್ಯರ ಪ್ರೀತಿಯನ್ನೂ ಗೌರವವನ್ನೂ ಗಳಿಸಿದರು. ಸಾವಿರಗಟ್ಟಲೆ ಜನಸಾಮಾನ್ಯರು ತುಂಬು ಹೃದಯದಿಂದ ಸತ್ಯಾಗ್ರಹಿಗಳನ್ನು ಶ್ಲಾಘಿಸಿ ಅಭಿನಂದಿಸಿದ್ದಾರೆ.

600ಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೋಲೀಸರು ಬಂಧಿಸಿದರು. ಒಂದು ತಂಡವನ್ನು ಬಂಧಿಸಿಕೊಂಡು ಹೋಗುವಷ್ಟರಲ್ಲೇ ಇನ್ನೊಂದು ತಂಡವು ಸಿದ್ಧವಾಗಿರುತ್ತಿತ್ತು. ಸಂಜೆಗೆ ಒಂದೊಂದೇ ತಂಡದ ಕಾರ್ಯಕರ್ತರನ್ನು ಮ್ಯಾಜಿಸ್ಟ್ರೇಟರ ಮುಂದೆ ಹಾಜರುಮಾಡಿದರು. ಬಂಧಿತರಿಗೆ ಮ್ಯಾಜಿಸ್ಟ್ರೇಟರ ಅಪ್ಪಣೆ: ತಪ್ಪು ಒಪ್ಪಿದರೆ ನಿಮ್ಮನ್ನು ಜಾಮೀನಿನ ಮೇಲೆ ಬಿಡುತ್ತೇನೆ". ಅಷ್ಟೇ ಸ್ಪಷ್ಟವಾಗಿ ಬಂಧಿತ ಕಾರ್ಯಕರ್ತರ ಉತ್ತರ: "ನಾವು ತಪ್ಪು ಮಾಡಲಿಲ್ಲ. ಶಾಂತಿಯುತ ಪಿಕೆಟಿಂಗ್ ಮಾತ್ರ ಮಾಡಿದ್ದೇವೆ". ಮ್ಯಾಜಿಸ್ಟ್ರೇಟರು ಎಲ್ಲರನ್ನೂ ಮೂರು ದಿನಗಳ ಮಟ್ಟಿಗೆ ರಿಮಾಂಡಿನಲ್ಲಿಡಲು ಆಜ್ಞೆ ಮಾಡಿದರು. ಇದು ಸಂಜೆ 6 ಗಂಟೆಯ ವರೆಗಿನ ಘಟನೆ. ಮರುದಿನದ ಕೆಲವು ಪತ್ರಿಕೆಗಳಲ್ಲಿ, ಬಂಧಿತರನ್ನು ತಾ. 14ರ ವರೆಗೆ ರಿಮಾಂಡಿನಲ್ಲಿಡಲಾಗಿದೆಯೆಂಬ ವರದಿಯೂ ಬಂದಿದೆ.

ಸತ್ಯಾಗ್ರಹಿಗಳ ತಂಡಗಳು ಒಂದರ ನಂತರ ಒಂದರಂತೆ ಬರುತ್ತಲೇ ಇದ್ದವು. ಒಂದೊಂದೇ ತಂಡವನ್ನು ರಿಮಾಂಡಿನ ಮೇಲೆ ಜೈಲಿಗೆ ಕೊಂಡೊಯ್ಯಲಾಯಿತು. ಕೊನೆಗೆ ಜೈಲಧಿಕಾರಿಗಳಿಂದ ಕೋರ್ಟಿಗೆ ವಿನಂತಿ: "ಜೈಲು ತುಂಬಿದೆ ದಯವಿಟ್ಟು ಇನ್ನು ಯಾರನ್ನೂ ಕಳುಹಿಸಬೇಡಿರಿ". ಅನಂತರ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಲಾದ ತಂಡದಲ್ಲಿ ಹೆಚ್ಚಿನವರು ಮಹಿಳೆಯರು. ಮ್ಯಾಜಿಸ್ಟ್ರೇಟರ ಅಪ್ಪಣೆಯಾಯಿತು: "ನಿಮ್ಮನ್ನು ಬಿಟ್ಟಿದ್ದೇನೆ, ಹೊರಟುಹೋಗಿ", ಮಹಿಳೆಯರು ಉತ್ತರಿಸಿದರು: "ನಾವು ಹೋಗುವುದಿಲ್ಲ. ನಮ್ಮಂತೆಯೇ ಪಿಕೆಟಿಂಗ್ ಮಾಡಿ ಬಂಧನಕ್ಕೊಳಗಾದ ನೂರಾರು ಕಾರ್ಯಕರ್ತರನ್ನು 3 ದಿನಗಳ ತನಕ ರಿಮಾಂಡಿನಲ್ಲಿಡಲು ಅಪ್ಪಣೆಯಾಗಿದೆ. ಪಿಕೆಟಿಂಗ್ ಮಾಡಿದ ಬೇರೆ ಬೇರೆ ತಂಡಗಳಿಗೆ ಬೇರೆ ಬೇರೆ ಕಾನೂನುಗಳಿವೆಯೇ? ಬಿಡುಗಡೆ ಮಾಡುವುದಿದ್ದರೆ ಎಲ್ಲರನ್ನೂ ಒಟ್ಟಿಗೆ ಬಿಡಬೇಕು. ಇಲ್ಲವಾದರೆ ನಾವು ಇಲ್ಲಿಂದ ಕದಲುವುದಿಲ್ಲ". ಕೊನೆಗೆ ಮ್ಯಾಜಿಸ್ಟ್ರೇಟರು, "ನೀವು ಕೋರ್ಟಿನ ಕೋಣೆಯ ಹೊರಗಾದರೂ ನಿಲ್ಲಿರಿ" ಎಂದರು. ಹೊರಗೆ ಬಂದ ಕಾರ್ಯಕರ್ತರು "ಬಂಧಿತರೆಲ್ಲರನ್ನೂ ಕೂಡಲೇ ಬಿಡುಗಡೆ ಮಾಡಿ" ಎಂದು ಜೋರಾಗಿ ಘೋಷಣೆ ಕೂಗತೊಡಗಿದರು. ತಂಡದ ನೇತೃತ್ವ ವಹಿಸಿದ್ದ ದ. ಕ. ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಯು. ಜನಾರ್ಧನ ನ್ಯಾಕರಿಗೆ ಮ್ಯಾಜಿಸ್ಟ್ರೇಟರಿಂದ ಕರೆ ಬಂತು. "ಅವರೆಲ್ಲರನ್ನೂ ಬಿಡುಗಡೆ ಮಾಡಿದರೆ ನೀವು ಹೊರಟು ಹೋಗುತ್ತೀರಾ?" ಎಂದು ಕೇಳಿದರು. "ಎಲ್ಲರನ್ನೂ ಬಿಟ್ಟರೆ ಹೋಗುತ್ತೇವೆ" ಎಂದರು ಕಾಂ. ನ್ಯಾಕರು. ಬಹುಶಃ ಆ ಕೋರ್ಟಿನ ಇತಿಹಾಸದಲ್ಲೇ ಪ್ರಥಮವಾದ ತೀರ್ಮಾನ ಮ್ಯಾಜಿಸ್ಟ್ರೇಟರಿಂದ ಬಂತು. ಕೆಲವೇ ತಾಸುಗಳ ಹಿಂದೆ ಮೂರು ದಿನಗಳಿಗೆ ರಿಮಾಂಡ್ ಮಾಡಲಾದವರ ಸಮೇತ ಎಲ್ಲಾ ಬಂಧಿತ ಕಾರ್ಯಕರ್ತರನ್ನೂ ನಿಶ್ಶರ್ತವಾಗಿ ಬಿಡುಗಡೆ ಮಾಡುವ ಆಜ್ಞೆಯಾಯಿತು.

ಜೈಲಿನಲ್ಲಿದ್ದವರು ಅಲ್ಲಿಂದಲೇ ನಡೆದುಕೊಂಡು ಬರಲು ಒಪ್ಪಲಿಲ್ಲ. ಕೊನೆಗೆ ಅವರ ಅಪೇಕ್ಷೆಯಂತೆ ಎಲ್ಲರನ್ನೂ ಪೋಲೀಸ್ ವ್ಯಾನುಗಳಲ್ಲಿ ತಂದು ಜಿಲ್ಲಾಧಿಕಾರಿಗಳ ಕಛೇರಿಯ ಗೇಟಿನ ಬಳಿ ಬಿಟ್ಟರು. ಪೋಲೀಸ್ ವ್ಯಾನುಗಳಿಗೆ ಕೆಂಬಾವುಟಗಳನ್ನು ಕಟ್ಟಿ, ಊರೇ ನಡುಗುವಂತೆ ಘೋಷಣೆಗಳನ್ನು ಕೂಗುತ್ತಾ ನಮ್ಮ ಕಾರ್ಯಕರ್ತರು ಜಿಲ್ಲಾಧಿಕಾರಿಗಳ ಕಛೇರಿಯ ತನಕ ಬಂದ "ಪೋಲೀಸ್ ವ್ಯಾನು ಮೆರವಣಿಗೆ"ಯು ಊರಿಗೇ ಸ್ಫೂರ್ತಿ ನೀಡಿತು. ಅಲ್ಲಿಂದ ಹೊರಟು, ಪಾರ್ಟಿಯ ನಗರ ಸಮಿತಿಯ ಕಛೇರಿಯ ತನಕ ಸಾಗಿದ ಪ್ರಚಂಡ ಮೆರವಣಿಗೆಯಲ್ಲಿ ಸಾವಿರಾರು ಮಂದಿ ಕಾರ್ಮಿಕರು ಭಾಗವಹಿಸಿದರು. ನಗರ ಸಮಿತಿಯ ಆಫೀಸಿನ ಮುಂದೆ ಸೇರಿದ ಸತ್ಯಾಗ್ರಹಿಗಳು, ಕಾರ್ಮಿಕರು ಮತ್ತು ಸಾರ್ವಜನಿಕರ ಬೃಹತ್ ಜನಸ್ತೋಮವನ್ನುದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಸೆಕ್ರೆಟಾರಿಯೆಟ್ ಸದಸ್ಯರಾದ ಕಾಂ. ಪಿ. ರಾಮಚಂದ್ರರಾಯರು ಭಾಷಣ ಮಾಡಿದರು.

ತಮ್ಮ ಸ್ಫೂರ್ತಿದಾಯಕ ಭಾಷಣದಲ್ಲಿ ಕಾಂ. ರಾಮಚಂದ್ರರಾಯರು, ಪಾರ್ಟಿಯ ಕರೆಗೆ ಓಗೊಟ್ಟು ಬೃಹತ್ ಸಂಖ್ಯೆಯಲ್ಲಿ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಾರ್ಯಕರ್ತರನ್ನು ಅಭಿನಂದಿಸಿದರು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಕಾರ್ಮಿಕರು ತಮ್ಮ ಕೂಲಿ, ಬೋನಸ್ ಇತ್ಯಾದಿ ಬೇಡಿಕೆಗಳಿಗಾಗಿ ಮಾತ್ರವೇ ಹೋರಾಡುವವರಲ್ಲ, ಜನಸಾಮಾನ್ಯರ ಸಮಸ್ಯೆಗಳಿಗಾಗಿಯೂ ನಾವು ಹೋರಾಡಿ ಈ ಸಮಸ್ಯೆಗಳ ಪರಿಹಾರಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧರಿದ್ದೇವೆಂಬುದನ್ನು ಈ ಹೋರಾಟದ ಮೂಲಕ ತೋರಿಸಿಕೊಟ್ಟಿದ್ದೇವೆಂದು ಅವರು ಹೇಳಿದರು. ಸಿಟಿಬಸ್ಸು ನಮ್ಮ ನಗರದ ಸಾರ್ವಜನಿಕ ಸಾರಿಗೆ ವ್ಯವಸ್ಥೆ. ಹೀಗಿರುವಾಗ ಎಲ್ಲಿಂದ ಎಲ್ಲಿಗೆ ಎಷ್ಟು ದರ ಎಂಬುದನ್ನು ನಿಗದಿ ಮಾಡುವ ಹಕ್ಕು ಯಾರದು? ಬಸ್ ಮಾಲಕರು ತಮ್ಮಿಷ್ಟ ಬಂದಂತೆ ಜನರನ್ನು ಸುಲಿಗೆ ಮಾಡಲು ಅವಕಾಶವಿರುವುದಾದರೆ ಇಲ್ಲಿ ಸರಕಾರವೆಂಬುದು ಇದೆಯೋ ಇಲ್ಲವೋ ಎಂದು ಕಾಂ. ರಾವ್ ಪ್ರಶ್ನಿಸಿದರು. ಸಿಟಿಬಸ್ಸಿನಲ್ಲಿ ಕಾನೂನು ಪ್ರಕಾರ ತುಂಬಿಸಬಹುದಾದದ್ದು 49 ಜನ ಮಾತ್ರ. ಇದಕ್ಕಿಂತ ಹೆಚ್ಚು ಜನರನ್ನು ತುಂಬಿಸಿದ್ದಕ್ಕೆ ಬಸ್ ಮಾಲಕರು ಸರಕಾರಕ್ಕೆ ತೆರಿಗೆಕೊಡುತ್ತಾರೆಯೆ? ಮಂಗಳೂರಿನ ಸಿಟಿಬಸ್ಸುಗಳಲ್ಲಿ 100ರಿಂದ 150ರಷ್ಟು ಜನರನ್ನು ತುಂಬಿಸುತ್ತಾರೆ, ಮಹಿಳೆಯರು, ಮಕ್ಕಳು, ಮುದುಕರೆನ್ನದೆ ಎಲ್ಲರನ್ನೂ ನೂಕಿ ತುಂಬಿಸಿ ಉಸಿರು ಕಟ್ಟಿಸಿಕೊಂಡೇ ಬಸ್ಸು ನಡೆಸುತ್ತಾರೆ. ಹೀಗಿರುವಾಗ ಡೀಸಿಲ್ ಬೆಲೆಏರಿಕೆಯಿಂದಾಗಿ ಸಿಟಿಬಸ್ ಮಾಲಕರಿಗಾದ ನಷ್ಟದ ಪ್ರಮಾಣವೆಷ್ಟು? ದರವನ್ನು ಏರಿಸಲೇಬೇಕಾರಿದ್ದರೆ ಎಷ್ಟು ಏರಿಸಬೇಕು? ಇದು ಬಸ್ ಮಾಲಕರ ಖಾಸಗಿ ಪ್ರಶ್ನೆಯಲ್ಲ. ಜಿಲ್ಲಾಧಿಕಾರಿಗಳು ಕೂಡಲೇ ಬಸ್ ಮಾಲಕರನ್ನೂ ಕಾರ್ಮಿಕರ, ವಿದ್ಯಾರ್ಥಿಗಳ ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನೂ ಕರೆದು ಚರ್ಚಿಸಿ ಈ ಸಮಸ್ಯೆಗೆ ಸರಿಯಾದ ಪರಿಹಾರವನ್ನು ಒದಗಿಸಬೇಕೆಂದು ಅವರು ಕರೆ ನೀಡಿದರು.

ತಾ. 11ರ ಪ್ರತಿಭಟನೆಯು ನ್ಯಾಯಕ್ಕಾಗಿ ಕಾರ್ಮಿಕರು ನಡೆಸಿದ ಹೋರಾಟದ ಆರಂಭ ಮಾತ್ರವೆಂದೂ, ಈ ಸಮಸ್ಯೆಗೆ ಸರಕಾರವು ಸೂಕ್ತ ಪರಿಹಾರ ಒದಗಿಸುವಲ್ಲಿ ವಿಫಲವಾದರೆ ತೀವ್ರರೀತಿಯ ಹೋರಾಟಗಳನ್ನು ನಡೆಸಬೇಕಾದೀತೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದ. ಕ. ಜಿಲ್ಲಾ ಸಮಿತಿಯು ಸರಕಾರವನ್ನು ಎಚ್ಚರಿಸಿದೆ.

○

ಜಿಲ್ಲಾಧಿಕಾರಿ ಹೇಳಿಕೆಯ ಖಂಡನೆ

ಜಿಲ್ಲೆಯ ಪ್ರಕ್ಷುಬ್ಧ ವಾತಾವರಣಕ್ಕೆ ತಾ. 12-6-80ರಂದು ನೀಡಿದ ಕೊಡಗು ಜಿಲ್ಲಾಧಿಕಾರಿಯವರ ಹೇಳಿಕೆಯೇ ಕಾರಣ, ಈ ಹೇಳಿಕೆ ಕನ್ನಡಪ್ರಭ, ಪ್ರಜಾವಾಣಿಯಲ್ಲಿ ಪ್ರಕಟವಾಗಿದೆ. ದೇಶದ ಈಶಾನ್ಯ ಭಾಗದಲ್ಲಿ ಛಿದ್ರಕಾರಿ ಬೆಳವಣಿಗೆ ಇರುವಾಗ ಇಲ್ಲಿಯ ಜಿಲ್ಲಾಧಿಕಾರಿಯವರು ಛಿದ್ರಕಾರಿ ಶಕ್ತಿಗಳಿಗೆ ಪ್ರೋತ್ಸಾಹ ನೀಡಿ ಜಿಲ್ಲೆಯ ಪ್ರಕ್ಷುಬ್ಧ ವಾತಾವರಣಕ್ಕೆ ಕಾರಣರಾಗಿದ್ದಾರೆ. "ಜಿಲ್ಲಾಧಿಕಾರಿಯವರ, ಸರಕಾರದ ಈ ಛಿದ್ರಕಾರಿ ಚಟುವಟಿಕೆ ಖಂಡನೀಯ" ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿರಾಜಪೇಟೆ ಶಾಖೆ ಖಂಡಿಸಿದೆ.

ದೇಶದಾದ್ಯಂತ ಬೆಳೆದುಬರುತ್ತಿರುವ ಜನತೆಯ ಚಳುವಳಿಗಳನ್ನು, ಜನತೆಯ ಅಸಮಾಧಾನಗಳನ್ನು ಬೇರೆಡೆಗೆ ತಿರುಗಿಸಲು ಸರಕಾರ ಜನತೆಯ ಮೇಲೆ ದಬ್ಬಾಳಿಕೆ ನಡೆಸಲು, ಜನತೆಯನ್ನು ಭೂಮಾಲಕ ಬಂಡವಾಳಶಾಹಿಗಳ ಗುಲಾಮರನ್ನಾಗಿಸಲು ಬಂಡವಾಳಶಾಹಿ-ಭೂಮಾಲಕವರ್ಗದ ಪ್ರತಿನಿಧಿಯಾಗಿರುವ ಕಾಂಗ್ರೆಸ್ (ಐ) ಸರಕಾರ ಇಂತಹ ಛಿದ್ರಕಾರಿ ಚಟುವಟಿಕೆಯಲ್ಲಿ ತೊಡಗುವುದು ಸಹಜವಾಗಿದೆ.

ಇತ್ತೀಚೆಗೆ ನಾಪೋಕ್ಲಿನ ಘಟನೆಯ ಹಾದಿಯನ್ನು ಕೆಣಕುವುದಾದರೆ ಎರಡು ಭಾಷೆಯನ್ನು ಹೊಂದಿಕೊಂಡಿರುವ ಮಾಲಕರು ಅವರ ಅವರೊಳಗಿನ ಜಗಳವನ್ನು ತಮ್ಮ ತಮ್ಮ ಭಾಷೆಯಲ್ಲಿ ಹೊಂದಿಕೊಂಡಿರುವ ಬಡಜನತೆಯ ಸಹಾಯದಿಂದ ಗಲಭೆ ಎಬ್ಬಿಸಿದರು. ಎರಡೂ ವಿಭಾಗದಲ್ಲೂ ಇಂದಿರಾ ಕಾಂಗ್ರೆಸ್ಸಿನ ಮುಖ್ಯ ಕಾರ್ಯಕರ್ತರಿದ್ದು ಈ ಗಲಭೆ ನಡೆಸಲು ಬಡಜನರಿಗೆ ಹಣದ ಆಮಿಷ, ಕುಡಿತದ ಆಸೆ ತೋರಿಸಿ ಗಲಭೆಯನ್ನು ಮುಂದುವರಿಸುತ್ತಿದ್ದಾರೆ. ಇಲ್ಲಿ ಇಂದಿರಾ ಕಾಂಗ್ರೆಸ್ಸಿನ ನೀತಿಯೇನು ಎಂಬುದು ಪ್ರಶ್ನಾರ್ಥಕ. ಹೀಗೆ ಇಂತಹ ಸಂಭವಗಳಿಂದ ಬಡಜನತೆ ರಾಜಕೀಯ ಭೇದಭಾವವಿಲ್ಲದೆ ದೂರ ನಿಲ್ಲಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕೇಳಿಕೊಂಡಿದೆ.

ಜಿಲ್ಲೆಯ ಜನತೆ ಇಂತಹ ಛಿದ್ರಕಾರಿ ಹೇಳಿಕೆಗಳನ್ನು, ಚಟುವಟಿಕೆಗಳನ್ನು ಬೆಂಬಲಿಸದೆ, ಜಿಲ್ಲಾಧಿಕಾರಿಯವರ ಈ ಹೇಳಿಕೆಯನ್ನು ಖಂಡಿಸುವಂತೆಯೂ ಮತ್ತು ರಾಷ್ಟ್ರದ ಸಮಗ್ರತೆ ಹಾಗೂ ಐಕ್ಯಮತ್ಯಕ್ಕಾಗಿ ಹೋರಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿರಾಜಪೇಟೆ ಶಾಖೆ ಕರೆ ನೀಡಿದೆ. ●

ಶಿಡ್ಲಘಟ್ಟದಲ್ಲಿ ಸರಕಾರಿ ನೌಕರರ ಮುಷ್ಕರ

ಕರ್ನಾಟಕ ರಾಜ್ಯದ ನಾಲ್ಕನೇ ದರ್ಜೆಯ ಸರ್ಕಾರಿ ನೌಕರರ ಸಂಘದ ಆದೇಶದ ಮೇರೆಗೆ ಶಿಡ್ಲಘಟ್ಟದ 4ನೇ ದರ್ಜೆ ನೌಕರರು ತಮ್ಮ 25 ಬೇಡಿಕೆಗಳ ಈಡೇರಿಕೆಗಾಗಿ ತಾ. 3-7-80 ರಿಂದ ಅನಿರ್ದಿಷ್ಟ ಕಾಲದ "ಧರಣಿ ಸತ್ಯಾಗ್ರಹ" ನಡೆಸಲು ತೀರ್ಮಾನಿಸಿ, ತಾ. 3-7-80ರಿಂದ ಕೆಲಸಗಳಿಗೆ ಗೈರುಹಾಜರಿಯಾಗಿ ಶಿಡ್ಲಘಟ್ಟ ತಾಲ್ಲೂಕು ಕಛೇರಿ ಮುಂಭಾಗದಲ್ಲಿ "ಧರಣಿ ಸತ್ಯಾಗ್ರಹವನ್ನು" ಆಫೀಸು ವೇಳೆಯಲ್ಲಿ 4-7-80ರ ವರೆವಿಗೂ, ಸಿ. ಐ. ಟಿ. ಯು. ಗೆ ಸೇರಿದ ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಶಿಡ್ಲಘಟ್ಟ ಶಾಖೆಯ ಪದಾಧಿಕಾರಿಗಳು ಸೇರಿ ಮುಷ್ಕರವನ್ನು ಯಶಸ್ವಿಯಾಗಿ ನಡೆಸಿದರು.

ತಾ. 5-7-80ರಲ್ಲಿ ಕೇಂದ್ರ ಸಂಘವು ಕಳುಹಿಸಿದ ಸೂಚನೆ ಮೇರೆಗೆ [ಅಂತರಾ ನೌಕರರ ಬೇಡಿಕೆಗಳನ್ನು ಈಡೇರಿಸುವುದಾಗಿ ಆಶ್ವಾಸನೆ ನೀಡಿದ್ದರಿಂದ] ಮುಷ್ಕರವನ್ನು ವಿಲ್ಲಿಸಿದ್ದು, ನಂತರ ನಡೆದ ಸಭೆಯಲ್ಲಿ ಸಂಘದ ಅಧ್ಯಕ್ಷರಾದ ಕಾಂ. ಕೆ. ರಾಮಯ್ಯ, ಕಾರ್ಯದರ್ಶಿ ಜೆ. ಪ್ರಸಾದ್‌ರವರು ಗಳು ಮಾತನಾಡುತ್ತಾ ತಮ್ಮ ಹೋರಾಟಕ್ಕೆ ಬೆಂಬಲವಿತ್ತ ಏಕಮಾತ್ರ ಸಂಘಟನೆಯಾದ ಸಿ. ಐ. ಟಿ. ಯು. ಗೆ ಕೃತಜ್ಞತೆ ಸಲ್ಲಿಸಿದರು. ಕಾಂ. ದೊರೆಸ್ವಾಮಿಯವರೂ ಮಾತನಾಡಿದರು. ○

ಮಳೆಯಿಂದ ರೈತರಿಗೆ ಕಷ್ಟನಷ್ಟ

ಮಲೆನಾಡುಪ್ರದೇಶವಾದ ಸಕಲೇಶಪುರ ತಹಸೀಲ್‌ಗೊಳಪಟ್ಟಂತೆ ಜುಲೈ 1, 2, ಮತ್ತು 3 ರಂದು ಭಾರಿ ಮಳೆ ಬಿದ್ದಿದ್ದು ಸುತ್ತಮುತ್ತಲ ಗ್ರಾಮಗಳ ರೈತರುಗಳು ಕಂಗಾಲಾಗುವ ಪರಿಸ್ಥಿತಿ ಉಂಟಾಗಿದೆ. ಕಳೆದ ವರ್ಷಗಳಲ್ಲಿ ಈ ಸಮಯಕ್ಕೆ ಸುಮಾರು 40–45 ಇಂಚುಗಳಷ್ಟು ಮಳೆ ಬೀಳುತ್ತಿದ್ದ ಪ್ರದೇಶಗಳಲ್ಲಿ ಈ ವರ್ಷ ಈಗಾಗಲೇ ಸುಮಾರು 80–85 ಇಂಚುಗಳಷ್ಟು ಮಳೆ ಬೀಳುತ್ತಿದ್ದೂ, ಒಂದೇ ಸಮನೆ ಸುರಿಯುತ್ತಿರುವ ಮಳೆಯಿಂದ ಕೃಷಿಕರು ವ್ಯವಸಾಯ ಕಾರ್ಯಗಳಲ್ಲಿ ನಿರತರಾಗಲು ತಡೆಯುಂಟಾಗಿದೆ.

ಹೇಮಾವತಿ ನದಿಯು 16 ಅಡಿಗಳಷ್ಟು ನೀರಿನಿಂದ ತುಂಬಿ ಹರಿಯುತ್ತಿರುವುದರಿಂದ, ಈ ನದಿಗೆ ತುಂಬಿಕೊಳ್ಳುವ ಚಿಕ್ಕ-ಪುಟ್ಟ ಹಳ್ಳ-ಝರಿಗಳೂ ತುಂಬಿಕೊಂಡು ನೀರು ಗದ್ದೆ ಬಯಲಿಗೆ ನುಗ್ಗಿ, ಮುಂಚಿತವಾಗಿ ಬೇಸಾಯಕ್ಕೆಂದು ಹಾಕಿಕೊಂಡಿದ್ದ ಭತ್ತದ ಸಸಿಯು ನಿರಂತರವಾಗಿ ನಿಂತ ನೀರಿನಿಂದ ಕೊಳೆತು ಹಲವಾರು ರೈತರುಗಳು ನಷ್ಟಕ್ಕೀಡಾಗಿದ್ದಾರೆ.

ಬೈಕೆರೆ-ಸುಳಗಳಲೆ-ಹೆನ್ನಲಿ-ನಾಗರಹೆಬ್ಬಸಾಲೆ-ಆಬಂಗೆ-ಬಸವನಹಳ್ಳಿ ಮಳಲಿ-ರಾಮೇನಹಳ್ಳಿ-ಹಾಲೇಬೇಲೂರು ಕೌಡಳ್ಳಿ-ಸತ್ತಿಗಾಲು-ಸಿದ್ದಾಪುರ ನಲ್ಲುಲಿ-ವಡೂರು-ಶುಕ್ರವಾರ ಸಂತೆ ಕಿರೋಡಿ ಮುಂತಾದ ಗ್ರಾಮಗಳಲ್ಲಿ ರೈತರು ಬಹಳನಷ್ಟಕ್ಕೆ ತುತ್ತಾಗಿದ್ದಾರೆ.

ತಾಲ್ಲೋಕಿನ ಹಲವಾರು ಹಳ್ಳಿಗಳಲ್ಲಿ ಕೆರೆ ಕಟ್ಟೆಗಳ ನೀರು ಒಂದೇ ಸಮನೆ ನುಗ್ಗಿ ಸಮತಟ್ಟು ಗದ್ದೆಗಳಿಗೆ ಮಣ್ಣು ಹೊಸತಾಗಿ ನುಗ್ಗಿ ಸಾವಿರಾರು ಎಕರೆ ಗದ್ದೆಗಳ ಪ್ರದೇಶವು ಅಸ್ತವ್ಯಸ್ತಗೊಂಡಿದೆ, ಈ ಅಸ್ತವ್ಯಸ್ತೆಯನ್ನು ಸರಿಪಡಿಸಿಕೊಳ್ಳಲು ಬಹಳಷ್ಟು ರೈತರು ಅಶಕ್ತರಾಗಿರುತ್ತಾರೆ.

ಈ ಬಗ್ಗೆ ಬಡರೈತರ ಸಹಾಯಕ್ಕೆ ಸರ್ಕಾರ ಪರಿಹಾರ ಒದಗಿಸುವ ಕಾರ್ಯಗಳಲ್ಲಿ ಕೂಡಲೆ ಮುಂದಾಗಬೇಕೆಂದು ಮಂಜ್ರಾಬಾದ್ ತಾಲ್ಲೂಕು ರೈತಸಂಘದ ಸಂಚಾಲಕ ಕಾಂ. ಎಚ್. ಕೆ. ಅಮೀರ್‌ಜಾನ್ ಒತ್ತಾಯಿಸಿದ್ದಾರೆ.

○

ಡಾಕ್ಟರರ ಔದಾಸೀನ್ಯ ಬಗ್ಗೆ ಖಂಡನೆ

ಚಿಂತಾಮಣಿ ತಾಲ್ಲೂಕಿನಲ್ಲಿ ಶ್ರೀಮತಿ ನಾಗಮ್ಮನ ಮೇಲೆ ಅತ್ಯಾಚಾರ ನಡೆದು, ಸದರಿ ನಾಗಮ್ಮನನ್ನು ಚಿಂತಾಮಣಿಯ ಮಹಿಳಾ ವೈದ್ಯಾಧಿಕಾರಿನಿ ಸಾವಿತ್ರಮ್ಮ ಕಡೆಗಣಿಸಿದ್ದು ಖಂಡನೀಯ. ಸದರಿ ಮಹಿಳಾ ವೈದ್ಯಾಧಿಕಾರಿನಿ ಸಾವಿತ್ರಮ್ಮನನ್ನು ಕೂಡಲೇ ಸಸ್ಪೆಂಡ್ ಮಾಡಬೇಕೆಂದು ಒತ್ತಾಯಿಸುತ್ತಾ, ಕೈಗೊಂಡ ಕ್ರಮದ ಬಗ್ಗೆ ಕೂಡಲೇ ಲಿಖಿತ ಮೂಲಕ ತಿಳಿಸಬೇಕೆಂದು ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಎಂ. ವೆಂಕಟೇಶ್ ರವರು ಒತ್ತಾಯಿಸಿದ್ದಾರೆ.

●

ಮಳೆಯಿಂದ ಕಷ್ಟಕ್ಕೊಳಗಾದವರಿಗೆ ಪರಿಹಾರಕ್ಕೆ ಕರೆ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸಕಲೇಶಪುರ ಶಾಖೆಯು ತಾ. 3-7-1980ರಂದು ತುರ್ತುಸಭೆ ಸೇರಿ ಕಳೆದ ಕೆಲವು ದಿನಗಳಿಂದ ಜಿಲ್ಲೆಯ ಹಾಗೂ ನೆರೆ ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಬೀಳುತ್ತಿರುವುದರ ಪರಿಣಾಮವಾಗಿ ಹೇಮಾವತಿ ನದಿ ತುಂಬಿ ಹರಿಯುತ್ತಿದ್ದು ನೆರೆನೀರು ಸಾವಿರಾರು ಎಕರೆ ಗದ್ದೆಗಳಿಗೆ ನುಗ್ಗಿ ನಾಟಿಹಾಕಿದ ಅಗೆಗಳೆಲ್ಲಾ ನೀರು ನಿಂತ ಪರಿಣಾಮವಾಗಿ ಕೊಳೆತು ಹೋಗಿರುವುದರ ಬಗ್ಗೆ ಮತ್ತು ಸಕಲೇಶಪುರ ನಗರದ ನದಿಯ ಬಳಿ ಇರುವ ಬಡಜನರ ಅನೇಕ ಮನೆಗಳು ಕುಸಿದು ಬಿದ್ದಿರುವುದು ಮತ್ತು ಕುಸಿಯಲಿರುವ ಸ್ಥಿತಿಯಲ್ಲಿರುವುದರ ಕುರಿತು ಕಳವಳ ವ್ಯಕ್ತಪಡಿಸಿತು. ನಗರದ ಪೋಲೀಸಿನವರು ಮತ್ತು ಪುರಸಭೆ ಸದಸ್ಯರು ಹೆಚ್ಚಿನ ಮುತುವರ್ಜಿ ವಹಿಸಿ ಸಕಾಲದಲ್ಲಿ ನದಿತೀರದಲ್ಲಿ ವಾಸಿಸುತ್ತಿದ್ದ ಜನರನ್ನು ಸ್ಥಳಾಂತರಿಸಿ ರಕ್ಷಣೆಯೊದಗಿಸಿದ್ದು ಅವರನ್ನು ಸಮಿತಿಯು ಅಭಿನಂದಿಸಿದೆ.

ನಷ್ಟಕ್ಕೊಳಗಾದ ಬಡರೈತರಿಗೆ, ವಸತಿ ಹೀನರಿಗೆ ರಾಜ್ಯಸರಕಾರ ಎಲ್ಲಾ ರೀತಿಯ ಪರಿಹಾರವನ್ನು ಕೂಡಲೇ ಘೋಷಿಸಬೇಕು ಎಂದು ಸಮಿತಿಯು ಒತ್ತಾಯಿಸಿದೆ,

●

ಮನೆ ಮೇಲೆ ದಾಳಿ

ಮಂಗಳೂರು, ಜೂನ್ : 28. ತಾರೀಕು 28ರಂದು ಪೂರ್ವಾಹ್ನ ಸುಮಾರು 10–45 ಗಂಟೆಗೆ ಇಲ್ಲಿಯ ಸಮೀಪದ ಜಪ್ಪು ಕುಡುಪಾಡಿ ಗ್ರಾಮದ ಎಂ. ಆರ್. ಕಾಂಪೌಂಡಿನಲ್ಲಿ ಶ್ರೀ ಬಿ. ಚಂದ್ರಶೇಖರ ಎಂಬವರ ಮನೆಗೆ ಮನೆಯ ಮಾಲಕ ಲಕ್ಷ್ಮಿ. ಎಸ್. ಬಂಗೇರರವರ ಗಂಡ ಶೀನ. ಎಂ ಬಂಗೇರರವರು, ದಯಾನಂದ ಫಿಟ್ಟರ್ ಹಾಗೂ ಮತ್ತಿಬ್ಬರೊಂದಿಗೆ ಮಾರಕಾಸ್ತ್ರಗಳೊಂದಿಗೆ ದಾಳಿ ನಡೆಸಿ ಹಲ್ಲೆ ನಡೆಸಿದರೆಂದು ತಿಳಿದು ಬಂದಿದೆ. ಆಗ ಮನೆಯಲ್ಲಿ ಗಂಡಸರು ಯಾರೂ ಇಲ್ಲವಾದ ರಿಂದ ಮಹಿಳೆಯೊಬ್ಬರಿಗೆ ಥಳಿಸಿದರು ಹಾಗೂ ಮನೆಯ ಮುಂಭಾಗದ ಛಾವಣಿಯನ್ನು ಹಾಳುಗೆಡವಿ ಮನೆಯ ಸಾಮಾಗ್ರಿಗಳನ್ನು ಹೊರಹಾಕಿದರೆಂದು ಹೇಳಲಾಗಿದೆ,

ಶ್ರೀ ಚಂದ್ರಶೇಖರರು ಈ ಮನೆಯಲ್ಲಿ ಸುಮಾರು 15 ವರ್ಷಗಳಿಂದ ಬಾಡಿಗೆಗಿದ್ದು ಕಳೆದ 4 ವರ್ಷಗಳ ಹಿಂದೆ ಶ್ರೀಮತಿ ಬಂಗೇರರು ಈ ಸ್ಥಳವನ್ನು ಕ್ರಯಕ್ಕೆ ಪಡಕೊಂಡಿರುತ್ತಾರೆ. ಆ ಬಳಿಕ ಬಂಗೇರರು ಮನೆ ಬಿಡಲು ಒತ್ತಾಯಿಸುತ್ತಿದ್ದರು. ಹಾಗೂ ಈ ಹಿಂದೆ ಇಂತಹದೇ ತಕ್ಷೀರು ನಡೆದಿತ್ತೆನ್ನಲಾಗಿದೆ.

ಪೋಲೀಸರಿಗೆ ಈ ಬಗ್ಗೆ ದೂರು ಸಲ್ಲಿಸಲಾಗಿದ್ದು ಡಿ. ಎಸ್. ಪಿ. ಶ್ರೀ ಬಿ. ಜಿ. ಕೂಕಟನೂರ್ ತನಿಖೆಯನ್ನು ನಡೆಸುವಂತೆ ಭರವಸೆ ನೀಡಿರುವರೆನ್ನಲಾಗಿದೆ.

○

ಫಲಿತಾಂಶ ಪ್ರಕಟಣೆಗೆ ಎಸ್. ಎಫ್. ಐ. ಒತ್ತಾಯ

ಕೋಲಾರ ಜಿಲ್ಲೆ ಚಿಂತಾಮಣಿಯ ಎ. ಎಂ. ಕಾಲೇಜಿನಲ್ಲಿ 1979–80ರ ವಾರ್ಷಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಕಾಪಿ ಮಾಡಿದರೆಂಬ ಕಾರಣದಿಂದ ಮರುಪರೀಕ್ಷೆ ನಡೆಸಲಾಗಿತ್ತು. ಇದರ ಫಲಿತಾಂಶ ಇನ್ನೂ ಪ್ರಕಟವಾಗಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿರುವುದರಿಂದ ಶೀಘ್ರದಲ್ಲೇ ಪ್ರಕಟಿಸಬೇಕೆಂದು ಎಸ್.ಎಫ್. ಐ. ರಾಜ್ಯ ಸಮಿತಿಯು ಬೆಂಗಳೂರು ವಿಶ್ವವಿದ್ಯಾಲಯವನ್ನು ಒತ್ತಾಯಿಸಿದೆ.

●

ತಗಡೂರು ದಲಿತರ ಸೈಟು ಸಮಸ್ಯೆ ಅರ್ಧ ಮಟ್ಟದ ಪರಿಹಾರ

ನಿಲ್ಲುವ ನೆಲೆಗಾಗಿ ಕಳೆದ ನಲವತ್ತು ವರ್ಷಗಳಿಂದ ಒದ್ದಾಡುತ್ತಿದ್ದ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ತಗಡೂರು ಗ್ರಾಮದ ಇನ್ನೂರು ಹರಿಜನ ಕುಟುಂಬಗಳಲ್ಲಿ ಕನಿಷ್ಟ ನೂರು ಜನರಿಗಾದರೂ ಜೋಪಡಿ ಹಾಕಿಕೊಳ್ಳಬಹುದಾದಂತಹ ಚಿಕ್ಕಚಿಕ್ಕ ನಿವೇಶನಗಳು ಜುಲೈ ಮೂರರಂದು ದೊರೆತಂತಾಗಿದೆ,

ಸ್ಥಳೀಯ ಕ್ಷೇತ್ರಾಧಿಕಾರಿ ರಂಗಪ್ಪನವರು ಶ್ರೀಮತಿ ಮುನಿಯಮ್ಮ ಎಂಬಾಕೆಗೆ ಮೊದಲ ಹಕ್ಕು ಪತ್ರ ನೀಡಿದರು, ತಗಡೂರು ಗ್ರಾಮದ ಆಸ್ಪತ್ರೆ ಕಟ್ಟಡದ ಆವರಣದಲ್ಲಿ ನಡೆದ ಸರಳ ಸಭೆಯಲ್ಲಿ ಜೂನಿಯರ್ ಇಂಜಿನಿಯರ್ ಮುಂತಾದ ಅಧಿಕಾರಿಗಳು, ಗ್ರಾಮದ ಮುಖ್ಯಸ್ಥರು, ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಉತ್ಸಾಹಿ ಕಾರ್ಯಕರ್ತರು ಸೇರಿದ್ದರು.

ತಗಡೂರುದಲಿತರಿಗೆ ನಿವೇಶನಕ್ಕಾಗಿ ಕರ್ನಾಟಕ ದಲಿತಸಂಘರ್ಷ ಸಮಿತಿಯು ಕಳೆದ 9 ತಿಂಗಳಿನಿಂದ ಹಲವಾರು ಹೋರಾಟಗಳನ್ನು ಅವ್ಯಾಹತವಾಗಿ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಬಂಡಾಯ ಸಾಹಿತ್ಯ ಸಂಘಟನೆಯ ಮೈಸೂರುಜಿಲ್ಲಾ ಸಂಚಾಲಕ ದೇವಯ್ಯ ಹರವೆಯವರು ಜುಲೈ 4ರಂದು ತಗಡೂರಿಗೆ ಭೇಟಿ ನೀಡಿ ಹೊಸ ನಿವೇಶನಗಳಲ್ಲಿ ತಳವೂರಿರುವ ದಲಿತರನ್ನು ಅಭಿನಂದಿಸಿದರು,

ವರದಿ : "ಆಂದೋಲನ"

●

ತುಮಕೂರಿನಲ್ಲಿ ಸರಕಾರಿ ನೌಕರರ ಮುಷ್ಕರ

ಕೇಂದ್ರ ಸಂಘದ ಆದೇಶದಂತೆ ತುಮಕೂರು ಜಿಲ್ಲಾ ರಾಜ್ಯಸರ್ಕಾರದ ನಾಲ್ಕನೇ ದರ್ಜೆ ನೌಕರರು ಜಿಲ್ಲಾ ಶಾಖೆಯ ಕರೆಯ ಮೇರೆಗೆ ಜಿಲ್ಲಾದ್ಯಂತ ತಮ್ಮ 25 ಅಂಶಗಳ ಬೇಡಿಕೆ ಈಡೇರಿಕೆಗಾಗಿ ಮುಷ್ಕರವನ್ನು ದಿನಾಂಕ 3-7-80 ರಿಂದ ಪ್ರಾರಂಭಿಸಿದರು, ತುಮಕೂರು ಜಿಲ್ಲಾ ಕೇಂದ್ರದಲ್ಲಿ ಸುಮಾರು 700 ಜನ ನಾಲ್ಕನೇ ದರ್ಜೆ ನೌಕರರಿದ್ದು ಅಗತ್ಯ ಸೇವಾ ಇಲಾಖೆಗಳಾದ ಆರೋಗ್ಯ, ನೀರು ಸರಬರಾಜು, ಎನ್. ಸಿ. ಸಿ, ಮುನ್ಸಿಪಾಲಿಟಿ ಮುಂತಾದ ಕಚೇರಿಗಳ ಮತ್ತು ಜಿಲ್ಲಾ ಆಸ್ಪತ್ರೆಯ ಎಲ್ಲಾ ನೌಕರರೂ ಮುಷ್ಕರದಲ್ಲಿ ಭಾಗವಹಿಸಿದ್ದು ಮಹಿಳಾ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಮುಷ್ಕರದಲ್ಲಿ ನಿರತರಾಗಿದ್ದು ಮುಷ್ಕರವನ್ನು ಯಶಸ್ವಿಯಾಗಿ ನಡೆಸಿದರು.

ಮಹಿಳೆಯನ್ನು ಕಡೆಗಣಿಸಿದ ಮಹಿಳಾ ಡಾ॥ ಬಗ್ಗೆ ಪ್ರತಿಭಟನೆ

ತಾ. 30-6-80ರಲ್ಲಿ ಚಿಂತಾಮಣಿ ತಾಲ್ಲೂಕಿನ ಕೈವಾರ ಹೋಬಳಿ ನಲ್ಲಗುಟ್ಲಹಳ್ಳಿಯ ದಂಪತಿಗಳಾದ ನಾರಾಯಣಸ್ವಾಮಿ, ನಾಗಮ್ಮ ಎಂಬುವರು ಸೌದೆ ಕಡೆಯಲು ಪಕ್ಕದ ಕನಂವಲ್ಲಿ ಬೆಟ್ಟಕ್ಕೆ ಹೋಗಿದ್ದು, ಚಿಂತಾಮಣಿಯ ಪುಂಡರು ಒಂಬತ್ತು ಜನ ಸದರಿ ನಾರಾಯಣಸ್ವಾಮಿಯವರನ್ನು ಮರಕ್ಕೆ ಕಟ್ಟಿಹಾಕಿ, ಶ್ರೀಮತಿ ನಾಗಮ್ಮನ ಮೇಲೆ ಹಲ್ಲೆ, ಅತ್ಯಾಚಾರವೆಸಗಿದ್ದು, ಸದರಿ ನಾಗಮ್ಮನನ್ನು ಚಿಂತಾಮಣಿ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಳ್ಳಲು, ಹಾಗೂ ಚಿಕಿತ್ಸೆ ನೀಡಲು ನಿರಾಕರಿಸಿ, ಹೀನಾಯವಾಗಿ ಮಾತನಾಡಿದ ಲೇಡಿ ಡಾಕ್ಟರನ್ನು ಕೂಡಲೇ ಸಸ್ಪೆಂಡ್ ಮಾಡಬೇಕೆಂದು ಸುಮಾರು ಒಂದು ಸಾವಿರ ಸಹಿ ಸಂಗ್ರಹಣೆಯನ್ನು ಮಾಡಿಸಿ ತಾ. 7–7–80ರಲ್ಲಿ ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಶಿಡ್ಲಘಟ್ಟ ಶಾಖೆಯ ಆಶ್ರಯದಲ್ಲಿ ಕಾರ್ಮಿಕರು, ರೈತರು, ಮಹಿಳೆಯರು ಭಾರಿ ಮೆರವಣಿಗೆ ಪ್ರದರ್ಶನ ನಡೆಸಿದರು,

●

ಸರಕಾರಕ್ಕೆ ಎಚ್ಚರಿಕೆ

ಇತ್ತೀಚೆಗೆ ಜನತೆಯ ಜೀವನಾವಶ್ಯಕ ವಸ್ತುಗಳ ದರ ತೀರಾ ಗಗನಕ್ಕೇರಿ ಜನಜೀವನವೇ ದುಸ್ತರವಾಗಿರುವಾಗ, ಇದೀಗ ನಮ್ಮ ಜಿಲ್ಲೆಯಲ್ಲಿ ಬಸ್ ಮಾಲಕರು ಸರಕಾರದ ಅನುಮತಿ ಪಡೆದು ಏಕಪಕ್ಷೀಯವಾಗಿ ಬಸ್ ಟಿಕೇಟುಗಳ ದರವನ್ನು ಏರಿಸಿ ಜನಸಾಮಾನ್ಯರಿಗೆ ಇನ್ನಷ್ಟು ಸಂಕಷ್ಟವನ್ನು ತಂದೊಡ್ಡಿದ್ದಾರೆ. ಈ ಬಸ್‌ದರ ಏರಿಕೆಯಿಂದ ಕಾರ್ಮಿಕರಿಗೂ, ನೌಕರರಿಗೂ, ವಿದ್ಯಾರ್ಥಿಗಳಿಗೂ ತುಂಬಾ ತೊಂದರೆಯಾಗಿದೆ. ಒಬ್ಬ ಬಸ್ ಪ್ರಯಾಣಿಕ ಇಂದು ತನ್ನ ಒಂದು ಪ್ರಯಾಣಕ್ಕೆ 20ರಿಂದ 40 ಪೈಸೆಯಷ್ಟು ಹೆಚ್ಚಿಗೆ ತೆರಬೇಕಾಗಿದೆ. ಆದುದರಿಂದ ಏಕಪಕ್ಷೀಯವಾಗಿ ಬಸ್ ಮಾಲಕರು ಏರಿಸಿದ ಬಸ್‌ದರವನ್ನು ಇಳಿಸಬೇಕೆಂದೂ, ಇಲ್ಲದಿದ್ದರೆ ಜನತೆಯ ಅವರಲ್ಲೂ ಮುಖ್ಯವಾಗಿ ಯುವಕರ ಪ್ರಬಲ ಪ್ರತಿಭಟನೆಯನ್ನು ಎದುರಿಸಬೇಕಾದೀತೆಂದೂ ಬಸ್ ಮಾಲಕರಿಗೂ, ಸರಕಾರಕ್ಕೂ ಯುವಕರ ಈ ಸಮಾವೇಶ ಎಚ್ಚರಿಕೆ ನೀಡುತ್ತದೆ.

○

ಮೆಗ್ನೀಸಿಯಂ ಕಾರ್ಮಿಕರ ಧರಣಿ

ಬೆಂಗಳೂರು ನಗರದ ಮೆಗ್ನೀಸಿಯಂ ಪ್ರಾಡಕ್ಟ್ಸ್ ಕಾರ್ಖಾನೆಯ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಒತ್ತಾಯಿಸುವುದಕ್ಕೆ ಕಾರ್ಖಾನೆಯ ಡೈರೆಕ್ಟರ್ ಆದ ಶ್ರೀ ಕೆ. ಪಾಪಾರಾವ್ ಅವರ ಮನೆಯ ಮುಂದೆ 10–7–80 ರಂದು ಧರಣಿ ಮುಷ್ಕರ ಹೂಡಿದ್ದರು. ಕಾನೂನುಬಾಹಿರ ಬೀಗಮುದ್ರೆಯನ್ನು ತೆಗೆಯುವುದು, ವಜಾ ಆದ 18 ನೌಕರರ ಪುನರ್‌ನೇಮಕ, ಬೇಡಿಕೆಗಳ ಈಡೇರಿಕೆ ಇವುಗಳನ್ನು ಒತ್ತಾಯಿಸಿ ಮೆಗ್ನೀಸಿಯಂ ಕಾರ್ಮಿಕರು 110 ದಿನಗಳಿಂದ ಹೋರಾಡುತ್ತಿದ್ದಾರೆ,

ಡೈರೆಕ್ಟರ್‌ಅವರು ಒಂದು ವಾರದೊಳಗಾಗಿ ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ಕೊಟ್ಟನಂತರ ಧರಣಿ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು. ಕಾಂ. ಜಾನ್ ವಿನ್ಸೆಂಟ್ ಮುಷ್ಕರದ ನೇತೃತ್ವ ವಹಿಸಿದ್ದರು,

●

ಶ್ರೀನಿವಾಸಪುರದಲ್ಲಿ ಭೂಹೀನ ರೈತರ ಹೋರಾಟ

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕು ಜಿಲ್ಲೆಯಲ್ಲೇ ಅತಿ ಹಿಂದುಳಿದ ತಾಲ್ಲೂಕಾಗಿದೆ. ಈ ತಾಲ್ಲೂಕಿನ ರಾಯಲ್‌ಪಾಡ್ ಹೋಬಳಿಯಲ್ಲಿ ಸಾಕಷ್ಟು ಬಂಜರು ಭೂಮಿ ಮತ್ತು ಸಾಗುವಳಿಗೆ ಯೋಗ್ಯವಾದ ಭೂಮಿ ಇದ್ದು, ಈ ಭೂಮಿಯನ್ನು ಭೂಹೀನರಿಗೆ ಹಂಚುವುದಾಗಿ ಹೇಳಿ ಕೆಲವು ಕಾಂಗ್ರೆಸ್ ಪುಡಾರಿಗಳು ಸಾವಿರಾರು ರೂಪಾಯಿ ಈ ಬಡಪಾಯಿಗಳಿಂದ ಸಂಗ್ರಹಿಸಿ ಇದುವರೆವಿಗೂ ಭೂಮಿ ಸಿಕ್ಕದೆ ವಂಚನೆಗೊಳಗಾಗಿದ್ದಾರೆ. ಇದನ್ನು ಕಂಡ ಕೆಲವು ಪ್ರಗತಿಪರ ಯುವಕರುಗಳು ಭೂಮಿಯನ್ನು ಸರಕಾರ ತಾನಾಗಿ ನಮಗೆ ಕೊಡುವುದಿಲ್ಲವೆಂದೂ, ಅದನ್ನು ನಾವು ಸಂಘಟನೆಯಾಗಿ ಬಲವಂತವಾದಿ ಪಡೆದುಕೊಳ್ಳಬೇಕೆಂತಲೂ, ಜಿಲ್ಲೆಯಲ್ಲಿ ಹೋದ ವರ್ಷ ನಡೆದ ಕೆಲವು ಭೂಗ್ರಹಣ ಚಳುವಳಿಗಳನ್ನು ನಡೆಸಿ ಭೂಮಿ ಪಡೆದುಕೊಂಡ ವಿಷಯವನ್ನು ಭೂಹೀನ ಕೃಷಿಕೂಲಿಗಾರರಿಗೆ ವಿವರಿಸಿದಾಗ ಅವರೂ ತಾವು ಸಂಘಟನೆಯಾಗುವುದಾಗಿ ತಿಳಿಸಿದರು. ಅದಕ್ಕೋಸ್ಕರ, ಶ್ರೀನಿವಾಸಪುರದ ಕೆಲವು ಯುವಕರು ಮತ್ತು ಅಡಗಲ್ಲಿನ ಮುನೀಶ್ವರಾಚಾರಿ ಹಾಗೂ ನಾರಾಯಣಸ್ವಾಮಿ ಮತ್ತು ಶ್ರೀರಾಮರೆಡ್ಡಿಯವರ ನೇತೃತ್ವದಲ್ಲಿ ರಾಯಲ್‌ಪಾಡ್ ಹೋಬಳಿಗೆ ಸೇರಿದ ಬಯ್ಯಪಲ್ಲಿ, ಮರೆಂಪಲ್ಲಿ, ಚೀಲೆಪಲ್ಲಿ, ಕೊಡಿಹಳ್ಳಿ, ಪಾತೂರು, ನೆಲವಂಕಿ, ತಿಮ್ಮನಹಳ್ಳಿ, ಸಂತೇಗಾನಪಲ್ಲಿ, ಪಾತಗಾನಪಲ್ಲಿ, ಜಿ. ರೆಡ್ಡಿವಾರಪಲ್ಲಿ, ಅವಗಾನಪಲ್ಲಿ ಈ ಮೇಲಿನ ಹಳ್ಳಿಗಳೆಲ್ಲಾ ರಾತ್ರಿಯ ಹೊತ್ತು ಸಣ್ಣ ಸಣ್ಣ ಮೀಟಿಂಗ್‌ಗಳನ್ನು ಮಾಡಿ ಭೂಹೀನ ಕೃಷಿಕೂಲಿಗಾರರನ್ನು ಸಂಘಟಿಸಿ ಒಂದು ದಿನ ಸಾಮೂಹಿಕವಾಗಿ ಶ್ರೀನಿವಾಸಪುರ ತಹಸೀಲ್‌ದಾರ್‌ರವರ ಕಛೇರಿಗೆ ತೆರಳಿ, ದರಖಾಸ್ತು ಅರ್ಜಿಗಳನ್ನು ಕೊಟ್ಟು ಅಕ್‌ನಾಲೆಡ್ಜ್‌ಮೆಂಟ್ ಕೇಳಿದಾಗ ಅಲ್ಲಿನ ಗುಮಾಸ್ತರು ಅವಾಕ್ ಆದರು. ಇದುವರೆವಿಗೂ ನಮ್ಮನ್ನು ಅಕ್‌ನಾಲೆಡ್ಜ್‌ಮೆಂಟ್ ಕೇಳಿದವರೇ ಇಲ್ಲ ನೀವೆ ಕೇಳಿದ್ದು ಎಂದು ಹೇಳಿದರು. ಆದಾದ ನಂತರ ಪ್ರತಿಯೊಂದು ಹಳ್ಳಿಗೂ ಒಬ್ಬೊಬ್ಬ ಕಮಿಟಿ ಸದಸ್ಯನನ್ನು ತೆಗೆದುಕೊಂಡು, ಒಂದು ತಾಲ್ಲೂಕು ಕಮಿಟಿಯನ್ನು ಮಾಡಿ ಆ ಕಮಿಟಿಯ ತೀರ್ಮಾನದಂತೆ ಕರಪತ್ರವನ್ನು ಹೊರಡಿಸಿ ಆ ಕರಪತ್ರಗಳನ್ನು ಹೋಬಳಿಯಲ್ಲೆಲ್ಲಾ ಹಂಚಿ ಭೂಹೀನರನ್ನೆಲ್ಲಾ ಸಂಘಕ್ಕೆ ಸೇರಿಸಿಕೊಳ್ಳತಕ್ಕದೆಂದು ತೀರ್ಮಾನಿಸಲಾಯಿತು. ತಾ. 13-7-80ರಂದು ಭೂಹೀನರ ಸಭೆಯನ್ನು ಬಡಜನರು ಕೇಳಿರುವ ಖಾಲಿ ಇರುವ ಕಾಡಿನಲ್ಲಿ ಕರೆಯಲಾಗಿತ್ತು. ಆ ಸಭೆಗೆ ಭೂಹೀನರನೇಕರು ಬಂದಿದ್ದರು ಮತ್ತು ಎಲ್ಲರಿಗಿಂತ ಮೊದಲೇ ಮೂರು ಜನ ಸಾಧುಗಳು ಭೂಮಿಯ ಆಸೆಗಾಗಿ ಬಂದಿದ್ದು ಸಭೆಯ ವೈಶಿಷ್ಟ್ಯ. ಇವರನ್ನೆಲ್ಲಾ ಉದ್ದೇಶಿಸಿ ಕಾಂ. ಜಿ. ವಿ. ಶ್ರೀರಾಮರೆಡ್ಡಿ ಮಾತನಾಡುತ್ತಾ ಮಳೆ ಬಿದ್ದ ತಕ್ಷಣ ಈ ಜಮೀನನ್ನು ಉಳುಮೆ ಮಾಡುವ ಮುಖಾಂತರ ಹೋರಾಟ ಪ್ರಾರಂಭವಾಗುವುದೆಂದು ವಿವರಿಸಿದರು. ಸಭೆಯಲ್ಲಿ ಮುನೀಶ್ವರಾಚಾರಿ ಮಾತನಾಡುತ್ತಾ ಈ ಸುತ್ತುಮುತ್ತಲ ಹಳ್ಳಿಗಳಲ್ಲಿ ಭೂಮಾಲಕರ ಕಿರುಕುಳಕ್ಕೆ ಹೆದರದೆ ಒಗ್ಗಟಾಗಿ ನಮ್ಮ ಗುರಿ ಸಾಧಿಸುವಲ್ಲಿ ಮುಂದಾಗಬೇಕೆಂದು ಸಭೆಗೆ ವಿನಂತಿಸಿದರು.

ಗೌನಪಲ್ಲಿಯಲ್ಲಿ ಬಹಿರಂಗಸಭೆ ಮಾಡಬೇಕೆಂದ ತೀರ್ಮಾನಿಸಲಾಯ್ತು. ಈಗ ಅಲ್ಲಿನ ಭೂಹೀನ ಕೃಷಿಕೂಲಿಗಾರರು ಮತ್ತು ಹರಿಜನರು ಮಳೆರಾಯನಿಗಾಗಿ ಕಾಯುತ್ತಾ ಹೋರಾಟಕ್ಕೆ ತಯಾರಿಯಾಗುತ್ತಿದ್ದಾರೆ.

●

ಐ. ಎನ್. ಟಿ. ಯು. ಸಿ. ಯ ಗೂಂಡಾಗಿರಿ

ಬೆಂಗಳೂರು ನಗರದ ಹೋಟೆಲ್ ಅಶೋಕ (ಐ.ಟಿ.ಡಿ.ಸಿ.)ನಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಎ.ಐ.ಟಿ.ಯು.ಸಿ. ಮತ್ತು ಸಿ.ಐ.ಟಿ.ಯು. ಸಂಘಗಳ ನಡುವೆ ಹೊಂದಾಣಿಕೆ ಒಪ್ಪಂದವಾಗಿ ಚುನಾವಣಾ ಕಣದಲ್ಲಿ ಎರಡು ಸಂಘಗಳಿಂದ ಪ್ರತಿನಿಧಿಗಳನ್ನು ಹಾಕಿದ್ದರು. 28-6-80ರಂದು ಚುನಾವಣೆ ನಡೆದು ಮತಗಳ ಎಣಿಕೆ ಆಗುವ ಸಂದರ್ಭದಲ್ಲಿ ಎರಡು ಸಂಘಗಳ ಪ್ರತಿನಿಧಿಗಳು ನಿಚ್ಚಳ ಬಹುಮತಗಳಿಸುತ್ತಿದ್ದುದನ್ನು ಕಂಡು, ಎಫ್. ಎಂ. ಖಾನ್ ಗುಂಪಿನ ಐ.ಎನ್.ಟಿ.ಯು.ಸಿ.ಯ ಕಡೆಯ ಗೂಂಡಾಗಳು ಚುನಾವಣೆ ಅಧಿಕಾರಿಯನ್ನು ಥಳಿಸಿ, ಮತಪೆಟ್ಟಿಗೆ ಮತ್ತು ಮತಪತ್ರಗಳನ್ನು ಕಸಿದು ಸುಟ್ಟುಹಾಕಿರುತ್ತಾರೆ. ಚುನಾವಣೆಯನ್ನು ಪುನಃ ಮುಂದೂಡಲಾಗಿದೆ. ಈ ರೀತಿಯ ಎಫ್. ಎಮ್. ಖಾನ್ ಮುಖಂಡತ್ವದ ಐ. ಎನ್. ಟಿ. ಯು. ಸಿ. ಧಾಳಿಯನ್ನು ಇತ್ತೀಚೆಗೆ ನಡೆದ ಅಶೋಕ ಹೋಟೆಲ್ ಕಾರ್ಮಿಕರ ಸರ್ವಸದಸ್ಯರ ಸಭೆಯನ್ನುದ್ದೇಶಿಸಿ ಮಾತನಾಡಿದ ಸಂಘದ ಅಧ್ಯಕ್ಷ ಕಾಂ. ಟಿ. ಎಸ್. ಅನಂತರಾಂ ಖಂಡಿಸಿದ್ದಾರೆ.

○

ಪಕ್ಷದ ಶಿರಸಿ ಶಾಖೆಯ ಸಭೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಿರಸಿ ಶಾಖೆಯ ಸರ್ವಸದಸ್ಯರ ಸಭೆಯು 9-7-80ರಂದು ಸೇರಿತ್ತು. ನಿತ್ಯೋಪಯೋಗಿ ವಸ್ತುಗಳ ಸರಿಯಾದ ವಿತರಣೆ, ಸಕ್ಕರೆ ಬೆಲೆ ಇಳಿಕೆ, ಬಸ್‌ದರ ಕಡಿಮೆ ಮಾಡುವುದು, ಕಟ್ಟಿಗೆ ಬೆಲೆ ಇಳಿಕೆ ಇವುಗಳನ್ನು ಒತ್ತಾಯಿಸಲು ಜನತೆ ಹೋರಾಡಬೇಕೆಂದು ಸಭೆ ಕರೆಕೊಟ್ಟಿತು.

○

ಕೋಶಿಶ್ ಹೋಟೆಲ್ ಕಾರ್ಮಿಕರ ಹೋರಾಟ

ಬೆಂಗಳೂರು ನಗರದ ಕೋಶಿಶ್ ಹೋಟೆಲ್ ಮಾಲೀಕರು ದಿನಾಂಕ 25-6-80ರಿಂದ ಅಕ್ರಮ ಬೀಗಮುದ್ರೆ ಘೋಷಿಸಿರುವ ವಿರುದ್ಧ ಕಾರ್ಮಿಕರು ಹೋಟೆಲ್ ಮುಂದೆ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ಸುಮಾರು 100 ಕೆಲಸಗಾರರು ಕೆಲಸ ಮಾಡುತ್ತಿರುವ ಈ ಹೋಟೆಲ್ ಶ್ರೀಮಂತವರ್ಗಕ್ಕೆ ಮೀಸಲಾಗಿದ್ದು ಬೆಂಗಳೂರಿನ ಎಮ್. ಜಿ. ರಸ್ತೆಯ ಪಕ್ಕದಲ್ಲಿದ್ದು ದಿನಕ್ಕೆ ನೂರಾರು ಗಿರಾಕಿಗಳು ಬೇರೆಬೇರೆ ದೇಶದ ಆಹಾರವನ್ನು ತಯಾರುಮಾಡುವ ಊಟ-ತಿಂಡಿ-ಕುಡಿತಕ್ಕಾಗಿ ಬರುವ ಇವರನ್ನು ಕಾರ್ಮಿಕರು ತಮ್ಮ ಸೇವೆಯಿಂದ ತಣಿಸುತ್ತಾರೆ. ಆದರೆ ಮಾಲೀಕವರ್ಗ ಕಾರ್ಮಿಕರ ಒಂದು ಸಣ್ಣ ಬೇಡಿಕೆಯನ್ನು ಈಡೇರಿಸುವ ಬದಲು ಅಕ್ರಮ ಬೀಗಮುದ್ರೆ ಘೋಷಿಸಿರುತ್ತಾರೆ. ಸಂಘದ ಮುಖಂಡ ಕಾಂ. ಟಿ. ಎಸ್. ಅನಂತರಾಂರವರು ಕಾರ್ಮಿಕ ಇಲಾಖೆಯಲ್ಲಿ ಮಾಲೀಕರೊಡನೆ ಮಾತುಕತೆ ನಡೆಸುತ್ತಿದ್ದಾರೆ. ಆದರೆ ಸಮಸ್ಯೆ ಇನ್ನೂ ಇತ್ಯರ್ಥವಾಗಿಲ್ಲ.

●

ತ್ರಿಪುರದ ನೆರವಿಗೆ ಅಗತ್ಯವಸ್ತು ಸಂಗ್ರಹ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಯಶವಂತಪುರ ಶಾಖೆಯ ಸಮಿತಿಯು 1-7-80ರಂದು ಸಭೆ ಸೇರಿ ತ್ರಿಪುರದಲ್ಲಿ ಹಿಂಸೆಗೊಳಗಾದ ಜನರ ಸಹಾಯಾರ್ಥವಾಗಿ ಹಣಕಾಸು, ಬಟ್ಟೆ, ಔಷಧಿ, ಇನ್ನಿತರ ವಸ್ತುಗಳನ್ನು ಸಂಗ್ರಹಿಸಲು ತೀರ್ಮಾನಿಸಿತ್ತು.

ಇದರಂತೆ 2-7-80ರಿಂದ ಯಶವಂತಪುರದಲ್ಲಿ ಕರಪತ್ರಗಳನ್ನು ಹಂಚುತ್ತ ಪಕ್ಷದ ಕಾರ್ಯಕರ್ತರು ಜನರಿಂದ ವಸ್ತುಗಳನ್ನು ಸಂಗ್ರಹಿಸಿದರು. ಇಲ್ಲಿಯವರೆಗೆ ಸುಮಾರು 200 ರೂ. ಹಣ, ಸಾಕಷ್ಟು ಬಟ್ಟೆ, ಔಷಧಿಗಳನ್ನು ಸಂಗ್ರಹಿಸಲಾಗಿದೆ.

○

ಪಂಚಾಯಿತಿ ಸದಸ್ಯರ ಸಭೆ

ಗುಬ್ಬಿ ತಾಲ್ಲೂಕು ಪಂಚಾಯತಿ ಸದಸ್ಯರ ಸಭೆಯು ಹಾಗಲ್ವಾಡಿ ಪಂಚಾಯತಿ ಅಧ್ಯಕ್ಷ ಎಚ್. ಸಿ. ಚಿನ್ನಪ್ಪ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿಯನ್ನು ಇಲ್ಲಿ ರಚಿಸಲಾಯಿತು.

ಗ್ರಾಮಾಂತರ ಅಭಿವೃದ್ಧಿಯ ಎಲ್ಲ ಕೆಲಸಕಾರ್ಯಗಳನ್ನೂ, ಕೂಲಿಗಾಗಿ ಕಾಳು ಯೋಜನೆಯನ್ನೂ ಪಂಚಾಯತಿಗೆ ವಹಿಸಬೇಕು, ಗ್ರಾಮಾಂತರ ಪ್ರದೇಶದ ಅಧಿಕಾರಿಗಳು ಅಲ್ಲೇ ವಾಸಿಸಬೇಕು, ಪಂಚಾಯತಿ ಚುನಾವಣೆಯ ರೀತಿ ಸುಧಾರಣೆಯಾಗಬೇಕು, ನೀರು, ದೀಪಗಳ ಬಿಲ್ ಅರ್ಧಕ್ಕೆ ಇಳಿಸಬೇಕು, ಮುಂತಾದ ನಿರ್ಣಯಗಳನ್ನು ಮಾಡಲಾಯಿತು. ಪಂಚಾಯತಿ ಕುಂದುಕೊರತೆಗಳ ಬಗ್ಗೆ ಜಿಲ್ಲಾಧಿಕಾರಿಗಳನ್ನು ಮತ್ತು ಮಂತ್ರಿಗಳನ್ನು ಭೇಟಿ ಮಾಡಬೇಕೆಂದು ನಿರ್ಧರಿಸಲಾಯಿತು. ಕಾಂಗ್ರೆ, ಜನತಾ ಬೆಂಬಲಿಗರೇ ಅಧಿಕವಾಗಿರುವ ಈ ಸಮಿತಿಗೆ ಎಚ್. ಸಿ. ಚನ್ನಪ್ಪ ಅವರು ಅಧ್ಯಕ್ಷರಾಗಿರುವುದು ಕಮ್ಯುನಿಸ್ಟರ ದುಡಿಮೆಯ ಫಲವಾಗಿದೆ.

○

ಐಕ್ಯರಂಗ ಓದಿ

ನಿಮ್ಮ ಸ್ನೇಹಿತರಿಬ್ಬರನ್ನು ಓದಿಸಿ

ಕಾಸರಗೋಡಿನಲ್ಲಿ ವಿದ್ಯಾರ್ಥಿನಿ ಸಮಿತಿ

ಕಾಸರಗೋಡಿನ ಎಸ್. ಎಫ್. ಐ. ವಿದ್ಯಾರ್ಥಿನಿ ಪ್ರಾದೇಶಿಕ ಸಮಿತಿಯನ್ನು ರಚಿಸುವ ಸಲುವಾಗಿ 5-7-80 ರಂದು ಸಭೆ ಸೇರಲಾಗಿತ್ತು. ಸಮಿತಿಯ ನಿರ್ವಾಹಕರಾಗಿ ಕಾಂ. ಪಿ. ವಿ. ಶೋಭನ ಆಯ್ಕೆಯಾದರು, ಉಪನಿರ್ವಾಹಕರಾಗಿ ಕಾಂ. ಗೀತಾ ಅವರನ್ನು ಆರಿಸಲಾಗಿದೆ. ಸಭೆಯಲ್ಲಿ ಕಣ್ಣಾನೂರು ಜಿಲ್ಲಾ ವಿದ್ಯಾರ್ಥಿನಿ ಸಮಿತಿಯ ನಿರ್ವಾಹಕರಾದ ಕಾಂ. ವಾಮಿನ ಭಾಗವಹಿಸಿದ್ದರು. ಕಣ್ಣಾನೂರು ಜಿಲ್ಲೆ ಎಸ್. ಎಫ್. ಐ. ಉಪಾಧ್ಯಕ್ಷ ಕಾಂ. ಕುಂಞಂಬು ಎಸ್. ಎಫ್. ಐ.ನ ಕಾರ್ಯಕ್ರಮಗಳನ್ನು ವಿವರಿಸಿದರು.

○

ಕಾಸರಗೋಡಿನಲ್ಲಿ ಎಸ್. ಎಫ್. ಐ. ಸಭೆ

ಕಾಸರಗೋಡು ತಾಲ್ಲೂಕಿನ ಕುಂಬಳೆಯ ಸರ್ಕಾರಿ ಹೈಸ್ಕೂಲಿನ ಎಸ್. ಎಫ್. ಐ. ವಿದ್ಯಾರ್ಥಿಗಳ ಸಭೆಯು 11-7-80ರಂದು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಕೆ. ಜನಾರ್ಧನಗಟ್ಟಿಯವರು ವಹಿಸಿದ್ದರು. ಕಾಂ. ಭಾಸ್ಕರ ಅವರು ಸ್ವಾಗತಿಸಿದರು. ಸಭೆಯಲ್ಲಿ ಪ್ರಾದೇಶಿಕ ಸಮಿತಿಯ ಆಕ್ಟಿಂಗ್ ಅಧ್ಯಕ್ಷರಾದ ಕಾಂ. ಕೆ. ಎಸ್. ಗೋಪಾಲಕೃಷ್ಣ, ಕಾರ್ಯದರ್ಶಿ ಕಾಂ. ಪಿ. ವಿ. ಜಯರಾಜನ್ ಭಾಗವಹಿಸಿದ್ದರು. ಯುವಕ ಫೆಡರೇಶನ್ನಿನ ಕಾಂ. ಎ. ಮಹಾಬಲಶೆಟ್ಟಿ ಮತ್ತು ಕಾಂ. ಎಂ. ಆನಂದ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು. ನಂತರ ಹೊಸ ಸಮಿತಿಯನ್ನು ಆರಿಸಲಾಯಿತು.

○

ಅಸ್ಸಾಂ ಚಳುವಳಿಗಾರರಿಂದ ಪಕ್ಷದ ಬೆಂಬಲಿಗರ ಕೊಲೆ

ಅಸ್ಸಾಂನಲ್ಲಿ ಈಗ ಚಳುವಳಿ ನಡೆಸುತ್ತಿರುವ ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ ಮತ್ತು ಗಣಸಂಗ್ರಾಮ ಪರಿಷತ್‌ನ ಸದಸ್ಯರು ಮತ್ತು ಬೆಂಬಲಿಗರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಸಿ. ಐ. ಟಿ. ಯು. ಮತ್ತು ಎಸ್. ಎಫ್. ಐ., ಕಿಸಾನ್‌ಸಭಾದ ಸದಸ್ಯರು ಮತ್ತು ಬೆಂಬಲಿಗರ ಮೇಲೆ ಈಗ ಹಲ್ಲೆಗಳನ್ನು ಆರಂಭಿಸಿದ್ದಾರೆ. ಅಪಾಯಕಾರಿ ಶಸ್ತ್ರಗಳನ್ನು ಹಿಡಿದು ಅವರು ಲೂಟಿ ಮತ್ತು ಕೊಲೆಗಳನ್ನು ಮಾಡುತ್ತಿದ್ದಾರೆ.

ಜೂನ್ 29ರಂದು ನೂರಾರು ಸಶಸ್ತ್ರ "ಚಳುವಳಿಗಾರರು" ಗೋಲ್‌ಪುರ ಗ್ರಾಮವನ್ನು ಮುತ್ತಿ ಕೆಲವು ಕಿಸಾನ್ ಕಾರ್ಯಕರ್ತರನ್ನು ಥಳಿಸಿದರು. ಜುಲೈ 2 ರಂದು ಅವರು ಕಾಮರೂಪ್‌ನ ನಲಬಾರಿ ಪೋಲೀಸ್ ಠಾಣೆ ಪ್ರದೇಶದ ಜಗರ ಪ್ರದೇಶದಲ್ಲಿ ಹಲವರಿಗೆ ಗಾಯಗಳನ್ನು ಮಾಡಿದರು. 9 ಜನ ಗಾಯಗೊಂಡವರನ್ನು ಅವರು ಎಳೆದುಕೊಂಡು ಹೋದರು. ಇದರಲ್ಲಿ ನಾಲ್ವರು ಇನ್ನೂ ಕಾಣೆಯಾಗಿದ್ದಾರೆ. ಎಸ್. ಎಫ್. ಐ. ನ ಮದನ್ ದೇಕ ಮತ್ತು ಅಧ್ಯಾಪಕ 'ಮಧಾಭ್' ಬರ್ಮನ್ ಅವರನ್ನು ಕತ್ತಿಗೆ ಉರುಳು ಹಾಕಿ ಎಳೆದೊಯ್ದರು. ಅವರನ್ನು ಕಷ್ಟದಿಂದ ರಕ್ಷಿಸಲಾಯಿತು. ಇನ್ನೊಬ್ಬ ಅಧ್ಯಾಪಕ ಭುವನೇಶ್ವರ್ ಪಾಠಕ್ ಇನ್ನೂ ಪತ್ತೆಯಾಗಿಲ್ಲ. ಬಹುಶಃ ಅವರು ಕೊಲೆಯಾಗಿರಬಹುದು. ಜಗರದ ಸುತ್ತಮುತ್ತ ಅಂಗಡಿಗಳನ್ನು ಸಹ ಲೂಟಿ ಮಾಡಲಾಗಿದೆ.

ಪೋಲೀಸ್ ಮತ್ತು ಆಡಳಿತ ಅಧಿಕಾರಿಗಳು ಇಲ್ಲಿ ಚಳುವಳಿಗಾರರ ಪಕ್ಷ ವಹಿಸಿದ್ದಾರೆ, ಮಾರ್ಕ್ಸ್‌ವಾದಿ ಪಕ್ಷದ ಎಲ್ಲ ಪ್ರತಿಭಟನೆಗಳನ್ನು ಆಡಳಿತ ಯಂತ್ರ ಕೇಳಿಸಿಕೊಳ್ಳುತ್ತಿಲ್ಲ. ●

ಆ. ೧೮ಕ್ಕೆ ರಾಜ್ಯಾದ್ಯಂತ ಸಾರ್ವತ್ರಿಕ ಮುಷ್ಕರ

(ಒಂದನೇ ಪುಟದಿಂದ)

ಹಳೇ ಮೈಸೂರಿನ ನಯವಾದ ಶೈಲಿ, ದಕ್ಷಿಣ ಕನ್ನಡದ ಒರಟು ಶೈಲಿ ಮತ್ತು ಶಕ್ತಿಯುತವಾದ ಉತ್ತರ ಕರ್ನಾಟಕ ಶೈಲಿಯಲ್ಲಿ ಮಾತನಾಡಿದ ಎಲ್ಲ ಪ್ರತಿನಿಧಿಗಳದೂ ರಾಜ್ಯಸರ್ಕಾರದ ಮೇಲೆ ಕಟುನುಡಿ. ಇವರ ಬಿರುಸು ನುಡಿಗಳು ಉದ್ದೇಶಿತ 'ಅಗತ್ಯ ಸೇವಾ ಮಸೂದೆ'ಯ ಮೇಲೆ ಮಾತ್ರವಲ್ಲ; ರಾಜ್ಯದ ಮುಖ್ಯಮಂತ್ರಿಗಳು ಇತ್ತೀಚೆಗೆ 10 ಲಕ್ಷ ರೂ. ಕೊಟ್ಟು ಖರೀದಿಸಿದ ಕಾರು, ಮಂತ್ರಿಮಹಾನ್ಯರ, ಅಧಿಕಾರಿಗಳ ಸಂರಕ್ಷಣೆಗೆಂದು ಒಂದು ಲಕ್ಷ ರೂ. ವೆಚ್ಚದಲ್ಲಿ ವಿಧಾನ ಸೌಧಕ್ಕೆ ಕಬ್ಬಿಣದ ಬೇಲಿಹಾಕಿಸಿರುವ ಕಡೆಗೆಲ್ಲಾ ಕಾರ್ಮಿಕರ ಕಣ್ಣು ಹಾಯಿತು. 'ಯಾರಪ್ಪನ ಮನೆಯ ಹಣವೆಂದು ಈ ರೀತಿ ಪೋಲು ಮಾಡುತ್ತಿದ್ದೀರಿ' ಎಂದು ಸರ್ಕಾರವನ್ನು ಅವರು ಗಟ್ಟಿಯಾಗಿ ಕೇಳಿದರು. ಹೆಚ್ಚುತ್ತಿರುವ ಪೋಲೀಸ್ ದಬ್ಬಾಳಿಕೆಯನ್ನು ಬಹುಮಂದಿ ಕಾರ್ಮಿಕರು ಪ್ರಸ್ತಾಪಿಸಿದರು.

ದೂರದ ದಾವಣಗೆರೆಯಿಂದ ಬಂದಿದ್ದ ಜಾಹಿರಾಬಿ ಎಂಬ ಮುಸ್ಲಿಂ ಮಹಿಳೆಯು ಮುಖ್ಯಮಂತ್ರಿಗಳಿಗೆ ಹಾಕಿದ ಹಲವಾರು ಪ್ರಶ್ನೆಗಳು ಆಕೆಯ ಮನದಾಳದಿಂದ ಬಂದಂತಹವು. ಬೆಲೆ ಏರಿಕೆಯಿಂದ ಬೆಂದು ಹೋಗಿರುವ ಈ ಗೃಹಿಣಿ, ಮಹಿಳಾಪ್ರಧಾನಿ ಇಂದಿರಾ ಗಾಂಧಿಗೆ ಮತ್ತು ಆಕೆಯ ನಾಟಕದ ಕಂಪನಿಯ ಪಾತ್ರಧಾರಿ ಗುಂಡೂರಾವ್‌ಗೆ ಕೇಳಿದ ಮುಖ್ಯ ಪ್ರಶ್ನೆ ಗಗನಕ್ಕೇರುತ್ತಿರುವ ಬೆಲೆಗಳ ಬಗ್ಗೆ. 'ಬೆಲೆಗಳನ್ನು ಇಳಿಸುತ್ತೇವೆ ಎಂದು ಚುನಾವಣೆಗೆ ಮುನ್ನ ಕೊಟ್ಟ ಆಶ್ವಾಸನೆಯನ್ನು ಈಡೇರಿಸದ ನಿಮ್ಮ ಬೆಲೆ ಇಳಿದಿದೆ' ಎಂದು ಛೀಮಾರಿ ಹಾಕಿದರು ಜಾಹಿರಾಬಿ. 'ಬೆಲೆಗಳನ್ನು ಇಳಿಸುವುದಿರಲಿ ಅವುಗಳನ್ನು ಹತೋಟಿಯಲ್ಲಿಡಲೂ ಸಾಧ್ಯವಾಗದ ಮುಟ್ಠಾಳ ಸರ್ಕಾರ' ಇದು ಎಂದು ತನ್ನೆಲ್ಲ ಕೋಪ ಪ್ರದರ್ಶಿಸಿದಳು ಆಕೆ.

ಇಂದಿರಾ ಕಾಂಗ್ರೆಸ್ ಸರ್ಕಾರ ಕಾರ್ಮಿಕರ ವಿರುದ್ಧ ತರುತ್ತಿರುವ ಉದ್ದೇಶಿತ 'ಅಗತ್ಯ ಸೇವಾ ಶಾಸನ'ವನ್ನು ನಾಡಿನ ಗಂಡುಮಕ್ಕಳು-ಹೆಣ್ಣುಮಕ್ಕಳೆಲ್ಲಾ ಕೂಡಿ ಬಗ್ಗುಬಡಿಯಬೇಕೆಂದು ಎಲ್ಲ ಕಾರ್ಮಿಕರನ್ನು ಕೇಳಿಕೊಂಡಳು ಆಕೆ.

ಆಗಸ್ಟ್ 18ರ ಸಾರ್ವತ್ರಿಕ ಮುಷ್ಕರದ ನಿರ್ಣಯಕ್ಕೆ ಸರ್ವಾನುಮತದ ಬೆಂಬಲ ಸಭೆಯಲ್ಲಿ ವ್ಯಕ್ತವಾಯಿತು.

'ಕಾರ್ಮಿಕ ಕ್ರಾಂತಿ ಚಿರಾಯುವಾಗಲಿ', 'ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ', 'ಕಾರ್ಮಿಕ ವಿರೋಧಿ ಶಾಸನ ತರುತ್ತಿರುವ ಇಂದಿರಾ-ಗುಂಡೂರಾವ್ ಸರ್ಕಾರಕ್ಕೆ ಧಿಕ್ಕಾರ' ಎಂಬ ಘೋಷಣೆಗಳೊಡನೆ ಸಮಾವೇಶ ಮುಕ್ತಾಯವಾಯಿತು

ಆಗಸ್ಟ್ 18ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸುವ ಪಣತೊಟ್ಟ ಕಾರ್ಮಿಕ ಪ್ರತಿನಿಧಿಗಳು ತಮ್ಮೂರುಗಳ ಕಡೆ ಹೊರಟರು.

●

.... ಸಿ.ಐ.ಟಿ.ಯು. ಕರೆ

(ಒಂದನೇ ಪುಟದಿಂದ)

ಹೋರಾಟವನ್ನು ಬೆಂಬಲಿಸಲು ರಾಜ್ಯ ಮಂಡಳಿಯು ಕರೆ ಇತ್ತಿತು.

ಇಂದಿನ ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಪರಿಸ್ಥಿತಿಯನ್ನು ಮತ್ತು ಕಾರ್ಮಿಕ ವರ್ಗದ ಜವಾಬ್ದಾರಿಯನ್ನು ವಿವರಿಸುತ್ತಾ ದೇಶದ ಈಶಾನ್ಯ ಭಾಗದಲ್ಲಿ ತಲೆ ಎತ್ತಿರುವ ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಿ, ರಾಷ್ಟ್ರೀಯ ಸಮಗ್ರತೆಯನ್ನೂ ಕಾರ್ಮಿಕ ವರ್ಗದ ಐಕ್ಯತೆಯನ್ನೂ ಸಾಧಿಸಬೇಕಾಗಿದೆ ಎಂದ ರಾಜ್ಯ ಸಮಿತಿ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ಅವರು ರಾಜ್ಯದಲ್ಲಿ ಸಿ.ಐ.ಟಿ.ಯು. ಸಂಘಟನೆಯನ್ನು ಬಲಪಡಿಸಲು ಶ್ರಮಿಸಲು ಕರೆ ಇತ್ತರು. ಬೆಳಗಾವಿಯಲ್ಲಿನ ಪರಿಸ್ಥಿತಿಯ ವರದಿ ಮಾಡಿದ ಕಾಂ. ವಿ.ಜೆ.ಕೆ. ನಾಯರ್ ಅವರು ರಾಜ್ಯದಾದ್ಯಂತ ಬಲಿಷ್ಠ ಚಳುವಳಿಯನ್ನು ಕಟ್ಟಲು ಕರೆ ಇತ್ತರು. ವರದಿಯನ್ನಿತ್ತ ರಾಜ್ಯಸಮಿತಿ ಪ್ರಧಾನಕಾರ್ಯದರ್ಶಿ ಕಾಂ. ನಂಜುಂಡಪ್ಪನವರು ಸಂಘಟನಾ ತೀರ್ಮಾನಗಳನ್ನೆಲ್ಲಾ ಜಾರಿಗೊಳಿಸಲು ಕರೆ ಇತ್ತರು. ಸಿ ಐ ಟಿ ಯು, ರಾಜ್ಯ ಕೇಂದ್ರಕ್ಕೆ ಎಲ್ಲಾ ರೀತಿಯ ಸಹಾಯ, ಸಹಕಾರ ಇತ್ತು ಬಲಪಡಿಸಲು ಕರೆ ಇತ್ತರು. ಹಲವಾರು ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆಗಳನ್ನಿತ್ತರು.

●

ಗುಡಿಸಲು ನಿವಾಸಿಗಳ ಹೋರಾಟ

ಸುಮಾರು 20-25 ವರ್ಷಗಳಿಂದ ಚಿತ್ರದುರ್ಗ ಪಟ್ಟಣದ 7ನೇ ಬ್ಲಾಕಿನಲ್ಲಿ ಸುಮಾರು 350 ಗುಡಿಸಲುಗಳು ಚನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಸೇರಿದ ಮುಜರಾಯಿ ಜಮೀನಿನಲ್ಲಿ ಹಾಕಲ್ಪಟ್ಟವು. ಆದರೆ ಈಗ್ಗೆ ಮೂರು ನಾಲ್ಕು ತಿಂಗಳ ಹಿಂದೆ ಸರ್ಕಾರಿ ಅಧಿಕಾರಿಗಳು ಈ ಗುಡಿಸಲುಗಳನ್ನು ಕೀಳಿಸಲು ಪ್ರಯತ್ನಿಸುತ್ತಿದ್ದಾರೆ. ಇದನ್ನು ಪ್ರತಿಭಟಿಸಿ ಗುಡಿಸಲು ನಿವಾಸಿಗಳು ಸಿ.ಪಿ.ಐ. (ಎಂ)., ಸಿ.ಪಿ.ಐ., ಎಸ್.ಎಫ್.ಐ., ರೈತಸಂಘ, ದಲಿತ ಸಂಘರ್ಷ ಸಮಿತಿ ಮುಂತಾದವರ ನೆರವಿನಿಂದ ಹೋರಾಟ ನಡೆಸುತ್ತಿದ್ದಾರೆ.

ಹೋರಾಟದ ಒಂದು ಅಂಗವಾಗಿ ದಿನಾಂಕ 14-7-80ರಂದು ಚಿತ್ರದುರ್ಗದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ನಂತರ ನಡೆದ ಬಹಿರಂಗ ಸಭೆಯಲ್ಲಿ ಶ್ರೀ ರಾಜಶೇಖರ ಗೌಡ, ಕಾಂ. ಅಹೋಬಲ ನಾಯಕ ಮುಂತಾದವರು ಭಾಷಣ ಮಾಡಿದರು. ●

ಹೊಸ ಪದಾಧಿಕಾರಿಗಳ ಆಯ್ಕೆ

ತಾ. 10-7-80 ರಂದು ಮೈಸೂರು ಡಿಸ್ಟ್ರಿಕ್ಟ್ ಹೋಟೆಲ್ ವರ್ಕರ್ಸ್ ಯೂನಿಯನ್ ಸರ್ವಸದಸ್ಯರ ಸಭೆಯು ಕಾಂ. ಎಂ.ಎನ್. ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಮೈಸೂರು ನಗರದ ಹೋಟೆಲ್ ಕಾರ್ಮಿಕರ ಸಮಸ್ಯೆಗಳನ್ನು ಚರ್ಚೆ, ಸಂಘಟನೆಯನ್ನು ಬಲಪಡಿಸುವ ನಿರ್ಧಾರ ತೆಗೆದುಕೊಂಡಿತು. ಈ ವರ್ಷಕ್ಕೆ ಕೆಳಕಂಡಂತೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷ: ಕಾಂ.ಎಂ.ಎನ್. ಉಗ್ರಪ್ಪ, ಉಪಾಧ್ಯಕ್ಷರು :ರಾಮಕೃಷ್ಣ ಮತ್ತು ಎಂ. ಶೇಖರ್, ಪ್ರಧಾನ ಕಾರ್ಯದರ್ಶಿ : ಕಾಂ. ಮೋಹನ್ ಕುಮಾರ್, ಕಾರ್ಯದರ್ಶಿಗಳು : ಬಿ.ಕೆ. ಗಣೇಶ್ ಮತ್ತು ರಘುರಾಂ, ಖಜಾಂಚಿ : ಪ್ರಕಾಶ್. 12 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆಮಾಡಲಾಯಿತು.

○

ಸಂಪಾದಕೀಯ

(ಒಂದನೇ ಪುಟದಿಂದ)

ಛಿದ್ರಕಾರಿ ಶಕ್ತಿಗಳು ರಾಷ್ಟ್ರದ ಸಮಗ್ರತೆಗೆ ಧಕ್ಕೆ ತರುತ್ತಲಿರುವಾಗ, ದೇಶದ ಆರ್ಥಿಕ ಸಾಮಾಜಿಕ ಬಿಕ್ಕಟ್ಟು ದಿನೇ ದಿನೇ ತೀವ್ರವಾಗುತ್ತಲಿರುವಾಗ ವ್ಯಕ್ತಿನಿಷ್ಠ ರಾಜಕೀಯದಿಂದ ರಾಜಕೀಯ ಬಿಕ್ಕಟ್ಟು ತೀವ್ರವಾಗಿ ಬೆಳೆಯುವುದು ಸಹಜ. ಇಂದಿರಾ ಕಾಂಗ್ರೆಸ್ ಇದಕ್ಕೇನೂ ಹೊರತಲ್ಲ. ಆಳುವವರ್ಗಗಳು ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಕೊಂಡೊಯ್ಯುತ್ತಲಿರುವಾಗ, ವ್ಯಕ್ತಿನಿಷ್ಠೆ ರಾಜಕೀಯವು ಸರ್ವಾಧಿಕಾರಿ ರೂಪವನ್ನೂ ಪಡೆಯುತ್ತದೆ. ಭಾರತ ದೇಶದಲ್ಲಿ ಈಗಾಗಲೇ ಈ ಅನುಭವವು ನಮಗಾಗಿದೆ. ಸಂಜಯಗಾಂಧಿಗೆ ಬದಲಾಗಿ ಇನ್ನೊಬ್ಬ ವ್ಯಕ್ತಿಯನ್ನು "ಮಹಾನ್ ವ್ಯಕ್ತಿ" ಮತ್ತು "ದೇಶದ ಮುಖಂಡ" ಆಗಿ ಮಾಡುವುದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಷ್ಟೇನೂ ಕಠಿಣವಾದ ಕೆಲಸವಲ್ಲ. ○

ತ್ರಿಪುರಾ ಪರಿಹಾರಕ್ಕೆ ದಾಂಡೇಲಿಯಲ್ಲಿ ಸಭೆ

ತ್ರಿಪುರಾದಲ್ಲಿ ಇತ್ತೀಚೆಗೆ ಹಿಂಸೆಗೊಳಗಾದ ನಿರಾಶ್ರಿತರಿಗೆ ಪರಿಹಾರವನ್ನು ಸಂಗ್ರಹಿಸುವ ಸಲುವಾಗಿ ದಾಂಡೇಲಿಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಖೆಯು 11-7-80 ರಂದು ಸಭೆ ಕರೆದಿತ್ತು. ತ್ರಿಪುರ ಮತ್ತು ಅಸ್ಸಾಂನ ಛಿದ್ರಕಾರಿ ಚಟುವಟಿಕೆಗಳ ಬಗ್ಗೆ ಕಾಂ. ಜಿ. ವಿ. ಪವಾರ್ ಮಾತನಾಡಿದರು. ನಂತರ ಕಾಂ. ಟಿ. ಎಸ್. ನಾಯ್ಕ, ಭಾಸ್ಕರ, ಎಲ್. ನಾಯ್ಕ, ಉಮೇಶನಾಯ್ಕ ಅವರು ಮಾತನಾಡಿದರು.

ಪರಿಹಾರ ಸಂಗ್ರಹದ ಮೊದಲ ಕಂತಾಗಿ 137 ರೂಪಾಯಿಗಳನ್ನು ತ್ರಿಪುರಕ್ಕೆ ಕಳುಹಿಸಲಾಯಿತು. ದಾಂಡೇಲಿ ಮುನಿಸಿಪಾಲಿಟಿಯ ಪಕ್ಷದ ಟಿಕೇಟಿನ ಮೇಲೆ ಆರಿಸಿಬಂದ ಸದಸ್ಯರಿಗೆ ತ್ರಿಪುರದ ಬಗ್ಗೆ ಧನಸಂಗ್ರಹ ಮಾಡಲು ವಿನಂತಿಸಲಾಗಿದೆ.

●

ಖ್ಯಾತ ಕಾರ್ಮಿಕ ನಾಯಕ ಕಾಂ. ದಿನೇನ್ ಭಟ್ಟಾಚಾರ್ಯ ನಿಧನ

ಖ್ಯಾತ ಕಾರ್ಮಿಕ ನಾಯಕ, ಸ್ವಾತಂತ್ರ ಹೋರಾಟಗಾರ, ಸಂಸತ್ ಸದಸ್ಯ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕ ಕಾಂ. ದಿನೇನ್‌ಭಟ್ಟಾಚಾರ್ಯ ಅವರು ದಿಲ್ಲಿಯ ಡಾ. ರಾಮಮನೋಹರ್ ಆಸ್ಪತ್ರೆಯಲ್ಲಿ ಜುಲೈ 13 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಪಕ್ಷಕ್ಕೆ ತಮ್ಮ ಸೇವೆಯನ್ನು ಪೂರ್ಣ ಮುಡಿಪಾಗಿಟ್ಟಿದ್ದ ಕಾಂ. ಭಟ್ಟಾಚಾರ್ಯ ಅವಿವಾಹಿತರು. ಅವರಿಗೆ 64 ವರ್ಷ ವಯಸ್ಸಾಗಿತ್ತು. ಶ್ರೀಯುತರು ಕಳೆದ ಹಲವಾರು ತಿಂಗಳಿಂದ ಗೂರಲು ರೋಗಕ್ಕೆ ತುತ್ತಾಗಿ ಆಸ್ಪತ್ರೆ ಸೇರಿದ್ದರು.

ಅವಿಭಾಜ್ಯ ಕಮ್ಯುನಿಸ್ಟ್ ಪಕ್ಷದಲ್ಲಿದ್ದಾಗಲೇ 1962 ರಲ್ಲಿ ಕಾಂ. ಭಟ್ಟಾಚಾರ್ಯ, ಪ.ಬಂಗಾಳದ ಶಿರಾಂಪುರ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದು, 1964ರಲ್ಲಿ ಪಕ್ಷ ವಿಭಜನೆಯಾದಾಗ ಅವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜೊತೆಗೆ ನಿಂತರು. ತಮ್ಮ ಅಂತ್ಯದವರೆಗೆ ಲೋಕಸಭಾ ಸದಸ್ಯರಾಗಿದ್ದ ಕಾಂ ಭಟ್ಟಾಚಾರ್ಯ ಅವರು ಪ್ರಖ್ಯಾತ ಕಾರ್ಮಿಕ ನಾಯಕರಾಗಿದ್ದರು. ಶ್ರೀಯುತರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯು ತನ್ನ ಅತೀವ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಸಿ.ಐ.ಟಿ.ಯು. ರಾಜ್ಯ ಮಂಡಳಿಯ ಸಂತಾಪ

15ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದ ಸಿಐಟಿಯು ಕರ್ನಾಟಕ ರಾಜ್ಯ ಮಂಡಳಿಯು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯದಲ್ಲಿ ಕಾಂ. ದಿನೇನ್ ಭಟ್ಟಾಚಾರ್ಯ ಸುಪ್ರಸಿದ್ಧ ಕಾರ್ಮಿಕ ಮುಖಂಡರಾಗಿದ್ದು, ಸಿ ಐ ಟಿ ಯು. ಸ್ಥಾಪನೆಯಾದಂದಿನಿಂದ ನಿಧನದವರೆಗೆ ಅವರು ಸಿ.ಐ.ಟಿ.ಯು ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು ಎಂದು ತಿಳಿಸಿದೆ. ಸಭೆಯು ಎದ್ದುನಿಂತು ಮೌನವಾಚರಿಸಿ ನಿರ್ಣಯವನ್ನು ಅಂಗೀಕರಿಸಿತು. ●

ಅಧಿಕಾರೀ ಪ್ರಪಂಚ

ಸತಿಯೊಡನೆ ಸಿನಿಮಾಗೆ ಸರಕಾರೀ ಕಾರು
ಜೊತೆಗುಂಟು ಆಗಾಗ ಕ್ಲಬ್ಬುಗಳು ಬಾರು
ವೆಚ್ಚಗಳ ಭರಿಸಲಿಕೆ ತಿನಬಹುದು ಲಂಚ
ರಾಯರೆಂದರು ಕೇಳಿ ಇದುವೇ ಪ್ರಪಂಚ

ಕಾರ್ಮಿಕ ನಾಯಕನ ರಾಜೀನಾಮೆ ಕೇಳಿದ ಕರ್ನಾಟಕ ಸರ್ಕಾರ

ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮ ಸಚಿವ ಸಂಪುಟಗಳ ಸಹೋದ್ಯೋಗಿಗಳ ರಾಜೀನಾಮೆ ಕೇಳಬಹುದು. ಕಾರಣಗಳಿದ್ದರೆ ತಮ್ಮ ಉದ್ಯೋಗಿಗಳನ್ನು ಸಸ್ಪೆಂಡ್ ಮಾಡಬಹುದು, ಸೇವೆಯಿಂದ ವಜಾ ಮಾಡಬಹುದು. ಸಚಿವರುಗಳಿಗೆ, ಅಧಿಕಾರಿಗಳಿಗೆ, ನೌಕರರಿಗೆ ಸಂಬಳ ಕೊಡುವ ಸರ್ಕಾರಕ್ಕೆ ವರ್ಗಮಾಡುವ, ವಜಾಮಾಡುವ, ಸಸ್ಪೆಂಡ್ ಮಾಡುವ ಅಧಿಕಾರಗಳು ಇವೆ. ಆದರೆ ಕರ್ನಾಟಕ ಸರ್ಕಾರವು ತನ್ನ ಉದ್ಯೋಗಿಯಲ್ಲದ ಟ್ರೇಡ್‌ಯೂನಿಯನ್ ನಾಯಕನೊಬ್ಬನ ರಾಜೀನಾಮೆ ಕೇಳಿ ದಾಖಲೆ ಸ್ಥಾಪಿಸಿದೆ.

ಸರ್ಕಾರ ರಾಜೀನಾಮೆ ಕೇಳಿರುವುದು ರಾಜ್ಯ ಸಿ. ಐ. ಟಿ. ಯು. ಕಾರ್ಯದರ್ಶಿ ವಿ. ಜೆ. ಕೆ. ನಾಯರ್ ಅವರನ್ನು. ನಾಯರ್ ಅವರು ರಾಜೀನಾಮೆ ಕೊಡುವಂತೆ ಕೇಳಿ ಪತ್ರ ಬರೆದಿರುವವರು ಕಾರ್ಮಿಕ ಕಮೀಷನರ್ ನಾಗರಾಜ ಶೆಟ್ಟಿಯವರು.

ಹೋಟೆಲ್ ಕಾರ್ಮಿಕರ ಸ್ಥಿತಿಗತಿ ಮತ್ತು ಅವುಗಳ ಸುಧಾರಣೆ ಬಗ್ಗೆ ಸರ್ಕಾರಕ್ಕೆ ವರದಿಯೊಂದನ್ನು ಕೊಡಲು ಕರ್ನಾಟಕ ಸರ್ಕಾರ ಕಾರ್ಮಿಕ ನಾಯಕರನ್ನೊಳಗೊಂಡ ಸಮಿತಿಯೊಂದನ್ನು ನೇಮಿಸಿ, ಆ ಸಮಿತಿಗೆ ಸಿ ಐ ಟಿ ಯು. ಕಾರ್ಯದರ್ಶಿ ನಾಯರ್ ಅವರನ್ನು ನೇಮಿಸಿತ್ತು. ಆದರೆ ಅದೇ ಸರ್ಕಾರದ ಅಧಿಕಾರಿಗಳು ನಾಯರ್ ಅವರು ರಾಜೀನಾಮೆ ಕೊಡುವಂತೆ ಕೇಳಿ ಬರೆದ ಪತ್ರವೊಂದನ್ನು ಸಿ. ಐ ಟಿ. ಯು. ಕಾರ್ಯದರ್ಶಿ ಜುಲೈ 14ರಂದು ನಡೆದ ಕಾರ್ಮಿಕ ಸಮಾವೇಶದಲ್ಲಿ ಬಹಿರಂಗಪಡಿಸಿದರು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT